ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 39 | ಸೆಪ್ಟೆಂಬರ್ 27, 1981 | ಬೆಲೆ : 60 ಪೈಸೆ

ನುಣುಚಿಕೊಳ್ಳುವ ಯತ್ನ

ಕೆಲವೇ ದಿನಗಳ ಹಿಂದೆ ಮುಗಿದಿರುವ ಲೋಕಸಭಾ ಅಧಿವೇಶನದಲ್ಲಿ ವಿರೋಧ ಪಕ್ಷಗಳೆಲ್ಲವೂ ಒಕ್ಕೊರಲಿನಿಂದ ಎತ್ತಿರುವ ಪ್ರಶ್ನೆಗಳಾವುದಕ್ಕೂ ನೇರ ಮತ್ತು ಸ್ಪಷ್ಟ ಉತ್ತರವನ್ನೀಯದೆ ದೇಶದ ಪ್ರಧಾನಿಯವರು ಇದೀಗ ದೀರ್ಘಕಾಲದ ವಿದೇಶ ಪ್ರವಾಸದ ಕಾರ್ಯಕ್ರಮದಿಂದಲಾಗಿ ಹೊರ ದೇಶಗಳಿಗೆ ಭೇಟಿಕೊಡುತ್ತಲಿದ್ದಾರೆ. ತಮ್ಮ 16 ದಿನಗಳ ಕಾರ್ಯಕ್ರಮವನ್ನು ಮುಗಿಸಿ ಭಾರತ ದೇಶಕ್ಕೆ ಹಿಂದಿರುಗುವಾಗ ಈಗಾಗಲೇ ಎತ್ತಿರುವ ಪ್ರಶ್ನೆಗಳಷ್ಟೇ ಅಲ್ಲದೆ, ಇನ್ನೂ ಹಲವು ಪ್ರಶ್ನೆ, ಸವಾಲುಗಳನ್ನು ಎದುರಿಸಬೇಕಾಗುತ್ತದೆ.

ಈ ಬಾರಿ ರಾಜ್ಯಸಭೆ ಮತ್ತು ಲೋಕಸಭೆ ಅಧಿವೇಶನಗಳು ನಡೆದಾಗ ಪ್ರಮುಖ ವಿರೋಧ ಪಕ್ಷಗಳೆಲ್ಲಾ ಒಂದಾಗಿ ಸೇರಿ ಸದನದೊಳಗೆ ಕಾರ್ಯಾಚರಣೆ ನಡೆಸಿವೆ. ಕೇಂದ್ರಸರಕಾರವು ಹೊರಡಿಸಿದ್ದ ಅಗತ್ಯ ಸೇವಾ ಸಂರಕ್ಷಣಾ ಸುಗ್ರೀವಾಜ್ಞೆಯನ್ನು ಪಾರ್ಲಿಮೆಂಟಿನ ಒಪ್ಪಿಗೆ ಪಡೆದು ಕಾನೂನನ್ನಾಗಿಸುವ ವಿಚಾರ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಅಂತುಳೆ ಅವರ "ಇಂದಿರಾ ಪ್ರತಿಭಾ ಪ್ರತಿಷ್ಠಾನ" ಭ್ರಷ್ಟಾಚಾರಕ್ಕೆ ಸಂಬಂಧಿಸಿದ ವಿಚಾರದಲ್ಲಿ ಪ್ರಮುಖ ವಿರೋಧ ಪಕ್ಷಗಳೆಲ್ಲವೂ ಒಂದಾಗಿ ನಿಂತು ಸರಕಾರದ ವಿರುದ್ಧ ಹೋರಾಡಿವೆ. ಸದನದೊಳಗೆ ತನ್ನ ಪಕ್ಷಕ್ಕಿರುವ ಬಹುಮತದ ಬಲದಿಂದ ಇಂದಿರಾಗಾಂಧಿ ಅವರು ಮತ್ತು ಅವರ ಮಂತ್ರಿಗಳು ಸರಕಾರದ ಅಸಂಸು ಕಾಯ್ದೆಯ ಕ್ರಮವನ್ನು ಮತ್ತು

ಸಂಪಾದಕೀಯ

ಅಂತುಳೆಯವರ ಭ್ರಷ್ಟ ವ್ಯವಹಾರವನ್ನು ಮುಚ್ಚಿಟ್ಟು ಅವರನ್ನು ರಕ್ಷಿಸಲು ಸಾಧ್ಯವಾಗಿದೆಯಾದರೂ, ಎತ್ತಿರುವ ಪ್ರಶ್ನೆಗಳಿಗೆ ಉತ್ತರವೀಯದೆ ನುಣುಚಿಕೊಂಡಿರುವರು. ಮುಂದಿರುವ ಪ್ರಶ್ನೆಗಳನ್ನು ಬದಿಗಿಟ್ಟು ವಿರೋಧ ಪಕ್ಷಗಳ ಮೇಲೆ ಕಿಡಿಕಾರಿರುವರು ಪ್ರಧಾನಿ ಇಂದಿರಾಗಾಂಧಿ.

ಎರಡು ಕಮ್ಯುನಿಸ್ಟ್ ಪಕ್ಷಗಳ ಮೇಲೂ, ಭಾ.ಜ.ಪ.ದ ಮೇಲೂ ವಿಷಕಾರಿದ ಪ್ರಧಾನಿ ಇಂದಿರಾಗಾಂಧಿಯವರು ಮತ್ತು ಅವರ ಬೆಂಬಲಿಗರು ಎಷ್ಟೇ ಪ್ರಯತ್ನಪಟ್ಟರೂ ಬೆಳೆಯುತ್ತಿರುವ ಸರ್ವಾಧಿಕಾರದ ಹಿನ್ನೆಲೆಯಲ್ಲಿ ಜನತೆಯ ಸಂಯುಕ್ತ ಚಳುವಳಿಯೂ, ವಿರೋಧ ಪಕ್ಷಗಳ ಕಾರ್ಯಾಚರಣೆಯೂ ಬೆಳೆಯುತ್ತಿರುವುದನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಅಸಂಸು ಕಾಯ್ದೆಯನ್ನು ಪ್ರತಿಭಟಿಸಿ ರಾಷ್ಟ್ರವ್ಯಾಪಿ ಕಾರ್ಯಕ್ರಮಕ್ಕೆ ಈಗಾಗಲೇ ಭರದಿಂದ ಸಿದ್ಧತೆ ನಡೆಯುತ್ತಿದೆ. ತುರ್ತುಪರಿಸ್ಥಿತಿಯ ಕರಾಳ ದಿನಗಳ ಅನುಭವ ಪಡೆದಿರುವ ಸಂಘಟಿತ ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪಾರ್ಲಿಮೆಂಟಿನ ಹೊರಗೆ ಒಡ್ಡುವ ಈ ಸವಾಲಿಗೆ ಇಂದಿರಾಗಾಂಧಿ ಅವರು ಉತ್ತರ ನೀಡಲೇಬೇಕಾಗುತ್ತದೆ. ಹಾಗೆಯೇ ಅಂತುಳೆ ವ್ಯವಹಾರದಿಂದಲಾಗಿ ಉದ್ಭವಿಸಿರುವ ಪ್ರಶ್ನೆಗಳನ್ನು ಪಾರ್ಲಿಮೆಂಟಿನ ಹೊರಗೆ ಜನತೆಯು ಎತ್ತುವುದಕ್ಕೆ ಸನ್ನದ್ಧವಾಗುತ್ತಿದೆ. ಅದಕ್ಕೂ ಇಂದಿರಾಗಾಂಧಿ ಅವರು ಉತ್ತರಿಸಲೇಬೇಕು.

[ಕಡೇ ಪುಟ ನೋಡಿ]

ಬಿಗಿ ಶರ್ತಗಳಿಗೆ ಅಮೇರಿಕದ ಒತ್ತಾಯ

"ದೇಶದ ಪ್ರಗತಿಗೆ ಮಾರಕ"

ಅಮೇರಿಕಾ ಸಾಮ್ರಾಜ್ಯಶಾಹಿಯ ಹತೋಟಿಯಲ್ಲಿರುವ ಅಂತರರಾಷ್ಟ್ರೀಯ ಹಣಕಾಸು ನಿಧಿ (ಇಂಟರ್‌ನ್ಯಾಷನಲ್ ಮೊನಿಟರಿ ಫಂಡು) ಯಿಂದ 5700 ಸಹಸ್ರ ಮಿಲಿಯ ಡಾಲರು ಸಾಲ ಮತ್ತು ಜಾಗತಿಕ ಬ್ಯಾಂಕಿನಿಂದ 700 ಮಿಲಿಯ ಡಾಲರು ಸಾಲ ಪಡೆಯಲು ಭಾರತ ದೇಶದ ಸರಕಾರವು ಶತಪ್ರಯತ್ನ ನಡೆಸುತ್ತಿರುವುದರ ವಿರುದ್ಧ ಎಲ್ಲಾ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪ್ರತಿಭಟನೆಯನ್ನು ವ್ಯಕ್ತಮಾಡಿವೆ. ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿರುವ ಈ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದೆಂದರೆ, ಅದು ದೇಶದ ಆರ್ಥಿಕ ಪ್ರಗತಿ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳಿಗೆ ಮಾರಕ. ಈ ಹಣಕಾಸು ಸಂಸ್ಥೆಗಳು ಹಾಕುವ ಶರ್ತಗಳಲ್ಲಿ ಮೊದಲನೆಯದೆಂದರೆ ಬಂಡವಾಳ ಹೂಡಲು ಬೇಕಾಗಿರುವ ವಾತಾವರಣವನ್ನು ಒದಗಿಸುವ ಭರವಸೆ. ಇದರರ್ಥ ಸಂಘಟಿತ ಕಾರ್ಮಿಕ ವರ್ಗವು ಹೋರಾಟಮಾಡುವ ಹಕ್ಕುಗಳನ್ನೇ ಕಳಕೊಳ್ಳುವುದು ಆಗಿದೆ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುವ ಪ್ರಯತ್ನದ ಪ್ರಾರಂಭದಲ್ಲೇ ಇಂದಿರಾ ಸರಕಾರ ಮೇಲೆ ಹೇಳಿದ ಮೊದಲ ಶರತ್ತನ್ನು ಒಪ್ಪಿಕೊಂಡಿರುವುದು ಸ್ಪಷ್ಟ. ಅಗತ್ಯ ಸೇವಾ ಸಂರಕ್ಷಣಾ ಸುಗ್ರೀವಾಜ್ಞೆಯ ಒಳಾರ್ಥವು ಇದೇ ಆಗಿದೆ. ಆದರೆ ಅರ್ಥಮಂತ್ರಿ ಆರ್. ವೆಂಕಟರಾಮನ್ ಮತ್ತು ಪ್ರಧಾನಿಯವರು ತಮ್ಮ ಸರಕಾರವು ಪಡೆಯಲಿರುವ ಸಾಲಗಳಿಗೆ ಏನೂ ಶರತ್ತುಗಳಿಲ್ಲ; ದೇಶದ ಹಿತಕ್ಕೆ ಏನೇನೂ ಧಕ್ಕೆ ಇಲ್ಲವೆಂದು ಘೋಷಿಸುತ್ತಾ ಬಂದಿದ್ದಾರೆ. ಆದರೆ ಅಮೇರಿಕ ಸಂಯುಕ್ತ ಸಂಸ್ಥಾನದ ರೀಗನ್ ಸರಕಾರವು ಇದೀಗ ಈ ಎರಡು ಹಣಕಾಸು ಸಂಸ್ಥೆಗಳ ಮೇಲೆ ಭಾರತಕ್ಕೆ ಸಾಲಕೊಡುವಾಗ ಕಠಿಣ ಶರತ್ತುಗಳನ್ನು ಹಾಕಬೇಕೆಂದು ಒತ್ತಾಯಿಸಿದೆ. ಹಣಕಾಸು ಸಂಸ್ಥೆಯು ಸಾಲಕೊಡಬೇಕಾದರೆ ಬೇಕಾಗಿರುವ ವಾತಾವರಣವಿರಬೇಕೆಂದೂ, ಜಾಗತಿಕ ಬ್ಯಾಂಕು ರೈಲ್ವೆ ವ್ಯವಸ್ಥೆಯನ್ನು ಆಧುನೀಕರಿಸುವುದಕ್ಕಾಗಿ ಸಾಲ ಕೊಡುವಾಗ ಹೊರದೇಶದಿಂದ ತರಿಸಿಕೊಂಡು ರೂಪಿಸಿರುವ ಕಂಪ್ಯೂಟರ್ ವ್ಯವಸ್ಥೆಯನ್ನೂ ಅಳವಡಿಸಿಕೊಳ್ಳಬೇಕೆಂದೂ ಹೇಳಲಾಗುತ್ತಿದೆ. ಯಾವುದರ ಬಗ್ಗೆ ವಿರೋಧ ಪಕ್ಷಗಳೂ, ಪ್ರಜಾಪ್ರಭುತ್ವ ಶಕ್ತಿಗಳೂ ಮತ್ತು ಸಂಘಟಿತ ಕಾರ್ಮಿಕವರ್ಗ ಎಚ್ಚರಿಕೆಯನ್ನಿತ್ತಿದ್ದುವೊ, ಅವು ಈಗ ಸ್ಪಷ್ಟವಾಗೇ ಗೋಚರಿಸುತ್ತಿವೆ.

ಅಮೇರಿಕ ಸಂಯುಕ್ತ ಸಂಸ್ಥಾನವು ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನಿತ್ತು ಭಾರತ ದೇಶದಂತಹ ಬೆಳವಣಿಗೆಯಾಗುತ್ತಿರುವ ಮತ್ತು ಹಿಂದುಳಿದಿರುವ ರಾಷ್ಟ್ರಗಳ ಅರ್ಥ ವ್ಯವಸ್ಥೆಯನ್ನು ಬಿಗಿಯಾದ ಹಿಡಿತದ

[ಕಡೇ ಪುಟ ನೋಡಿ]

ಜಿತೇಂದ್ರ ನಾರಾಯಣ ಆಯೋಗದ ಅಭಿಮತ

ಕೋಮುಗಲಭೆಗೆ ಆರ್. ಎಸ್. ಎಸ್. ಕಾರಣ

1979 ಏಪ್ರಿಲ್ ನಲ್ಲಿ ನಡೆದ ಬಿಹಾರ್‌ನ ಜೆಂಷೆಡ್‌ಪುರ ಗಲಭೆಗೆ ಆರ್.ಎಸ್.ಎಸ್. ಕಾರಣವೆಂದು ಈ ಕುರಿತು ನಿಯಮಿಸಿದ ಮೂರು ಸದಸ್ಯರ ಜಿತೇಂದ್ರ ನಾರಾಯಣ ಆಯೋಗವು ಅಭಿಪ್ರಾಯಪಟ್ಟಿದೆ. 108 ಜನರು ಜೆಂಷೆಡ್‌ಪುರ ಗಲಭೆಯಲ್ಲಿ ಪ್ರಾಣ ಕಳೆದುಕೊಂಡಿದ್ದರು. ಸಾವಿರಾರು ಜನ ಗಾಯಗೊಂಡಿದ್ದರು. ಆಗ ಬಿಹಾರ್‌ನಲ್ಲಿ ಅಧಿಕಾರದಲ್ಲಿದ್ದ ಜನತಾ ಸರಕಾರ ಈ ಆಯೋಗವನ್ನು ನಿಯಮಿಸಿತ್ತು.

ಆರ್. ಎಸ್. ಎಸ್.ನ ಪ್ರಮುಖ ಬಾಳಾಸಾಹೇಬ್ ದೇವರಸರು ಗಲಭೆಗೆ ಪ್ರಚೋದಿಸಿರುವುದಾಗಿ ಆಯೋಗ ಹೊರಗೆಡವಿದೆ. ತಮ್ಮ ಶಾಖಾ ಸಭೆಯೊಂದರಲ್ಲಿ ಮಾತನಾಡುತ್ತಾ ಕೋಮು ಬೀಜ ಬಿತ್ತಿದ್ದಾರೆ. "ಭಾರತದಲ್ಲಿ ದಿನೇ ದಿನೇ ಮಸೀದಿಗಳು ಹುಟ್ಟಿಕೊಳ್ಳುತ್ತಿವೆ. ನಮ್ಮ ದೇಶದಲ್ಲೇ ಹಿಂದೂಗಳಿಗೆ ಧಾರ್ಮಿಕ ಮೆರವಣಿಗೆ ಹೊರಡಿಸುವ ಅವಕಾಶವಿಲ್ಲ. ಅರಬ್ ದೇಶದಲ್ಲಿ ದೇವಸ್ಥಾನಗಳನ್ನು ಕಟ್ಟಲು ಅರಬರು ಅನುಮತಿ ಕೊಡುವರೇ?" ಈ ಮುಂತಾಗಿ ಪ್ರಚೋದನಕಾರಿ ಭಾಷಣವನ್ನು ದೇವರಸರು ಮಾಡಿದ್ದರು. ಅಲ್ಲದೇ ಜಂಷೆಡ್‌ಪುರದ ವಿವಾದಾಸ್ಪದ 14ನೇ ನಂಬರ್ ರಸ್ತೆಯನ್ನು ಪ್ರಸ್ತಾಪಿಸಿದ್ದರು. ದೇವರಸರ ಈ ಪ್ರಚೋದನಕಾರಿ ಭಾಷಣ ಹಿಂದೂ ಕೋಮುವಾದಿಗಳನ್ನು ಕೆರಳಿಸಲು ಸಾಕಾಯಿತು ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಆಗಿನ ಜನತಾಪಕ್ಷದ ಶಾಸಕ (ಈಗ ಬಿ. ಜೆ. ಪಿ.) ದೀನನಾಥ ಪಾಂಡೆಯು ಈ ಗಲಭೆ ಮುಖ್ಯ ಕಾರಣನಾಗಿರುವನಲ್ಲದೇ ಗಲಭೆಗೆ ಕಾರಣವಾಗುವ ಆಸ್ಫೋಟಕ ಪರಿಸ್ಥಿತಿಯನ್ನು ಉದ್ದೇಶಪೂರ್ವಕ ಉಂಟುಮಾಡಿದ್ದರು ಎಂದು ಆಯೋಗ ತಿಳಿಸಿದೆ. ಅಲ್ಲದೆ ಗಲಭೆ ಸಮಯದಲ್ಲಿ ಬಿಹಾರದ ಮಿಲಿಟರಿ ಪೋಲೀಸರು ಮತ್ತು ಅಧಿಕಾರಿಗಳು ಕೋಮುವಾದಿಗಳೊಡನೆ ಶಾಮೀಲಾಗಿದ್ದರು ಎಂದೂ ಆಯೋಗ ಗುರುತಿಸಿದೆ. ಪೋಲೀಸ್ ಅಧಿಕಾರಿಗಳು ಅಲ್ಪಸಂಖ್ಯಾತರ ಮೇಲೆ ನಡೆದ ಈ ಅಮಾನುಷ ಹಲ್ಲೆಗೆ ಸಂಚುಮಾಡಿದವರ ಜೊತೆ ಸಂಬಂಧವಿಟ್ಟುಕೊಂಡಿದ್ದರು ಎಂದೂ ತಿಳಿಸಿದೆ.

ನಿರೀಕ್ಷಿಸಿದಂತೆಯೇ ಬಾಳಾಸಾಹೇಬ್ ದೇವರಸರು ಈ ಆಯೋಗದ ವರದಿಯನ್ನು "ಸುಳ್ಳು, ಆಧಾರರಹಿತ ಮತ್ತು ರಾಜಕೀಯ ದುರುದ್ದೇಶವುಳ್ಳದ್ದು" ಎಂದು ಆಪಾದಿಸಿದ್ದಾರೆ. ಸ್ವಾರಸ್ಯಕರ ವಿಷಯವೆಂದರೆ ಭಾರತೀಯ ಜನತಾಪಕ್ಷದ ಅಧ್ಯಕ್ಷ ಎ. ಬಿ. ವಾಜಪೇಯಿಯವರು ತಂತಿ ಸಂದೇಶದ ಮೂಲಕ ಬಿಜೆಪಿ ಶಾಸಕ ದೀನಾನಾಥಪಾಂಡೆಯನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಸಸ್ಪೆಂಡ್ ಮಾಡಿದ್ದಾರೆ. "ಆಯೋಗದ ನಿಲುವು ಒಪ್ಪಲಾಗದಿದ್ದರೂ, ಆಯೋಗಕ್ಕೆ ಗೌರವಕೊಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ" ಎಂದು ವಾಜಪೇಯಿಯವರು ತಿಳಿಸಿದ್ದಾರೆ. ವಾಜಪೇಯಿಯವರ ಈ ನಾಟಕ ಆರ್. ಎಸ್. ಎಸ್.ನ್ನು ನಿರ್ದೋಷಿಯೆಂದು ಸಾಬೀತು ಮಾಡಲು ಸಹಾಯಕವಾಗದು.

[ಕಡೇ ಪುಟ ನೋಡಿ]

ಸಮನ್ವಯ ಸಮಿತಿಯ ರಚನೆ

ತಾರೀಖು 16-9-1981 ರಂದು ದ. ಕ. ಜಿಲ್ಲೆಯ ಕುಂದಾಪುರದಲ್ಲಿ ರಾಜ್ಯದ ಪ್ಲೈವುಡ್ ಕಾರ್ಮಿಕರ ಪ್ರತಿನಿಧಿಗಳ ಸಭೆಯು ಸಿ. ಐ. ಟಿ. ಯು.ವಿನ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಕಾಂ.ಎಸ್. ಸೂರ್ಯನಾರಾಯಣ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಿ. ಐ. ಟಿ.ಯು.ವಿನ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಸಿ. ನಂಜುಂಡಪ್ಪನವರು ಮತ್ತು ದ. ಕ. ಜಿಲ್ಲಾ ಕಾರ್ಯದರ್ಶಿಯವರಾದ ಕಾಂ. ಕೆ. ಮುಸಬ್ಬನವರು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್‌ರವರು ಪ್ರತಿನಿಧಿಗಳನ್ನು ಸ್ವಾಗತಿಸಿ, ರಾಜ್ಯಮಟ್ಟದಲ್ಲಿ ಪ್ಲೈವುಡ್ ಕಾರ್ಮಿಕರು ಸಂಘಟನೆಯಾಗುವುದರ ಮಹತ್ವ ಹಾಗೂ ಪ್ಲೈವುಡ್ ಕಾರ್ಮಿಕರು ಎದುರಿಸುವ ಸಮಸ್ಯೆಗಳನ್ನು ವಿವರಿಸಿದರು.

ಕರ್ನಾಟಕ ರಾಜ್ಯದ ಬೇರೆಬೇರೆ ವಿಭಾಗಗಳಿಂದ ಬಂದ ಪ್ಲೈವುಡ್ ಕಾರ್ಮಿಕ ಪ್ರತಿನಿಧಿಗಳು ತಮ್ಮ ಹೋರಾಟ ಹಾಗೂ ತಾವು ಎದುರಿಸುವ ಸಮಸ್ಯೆಗಳನ್ನು ವಿವರಿಸಿದರು. ಕಾಂ. ಎಂ. ಬಿ. ಕಟ್ಟಿ (ಧಾರವಾಡ); ಕಾಂ. ಪ್ರಭುದಾಸ್ (ದಾಂಡೇಲಿ); ಮತ್ತು ಕಾಂ. ವಿಠಲ್ (ಹುಂಗಾರಕಟ್ಟೆ) ನವರು ರಾಜ್ಯಮಟ್ಟದ ಸಂಘಟನೆ ಮತ್ತು ಸೌಹಾರ್ದ ಕಾರ್ಯಕ್ರಮದ ಮಹತ್ವದ ಕುರಿತು ವಿವರಿಸಿದರು.

ಕಾಂ.ಎಸ್. ಸೂರ್ಯನಾರಾಯಣ ರಾವ್; ಕಾಂ.ಸಿ. ನಂಜುಂಡಪ್ಪ ಮತ್ತು ಕಾಂ. ಕೆ. ಮುಸಬ್ಬನವರು ತಮ್ಮ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತ, ರಾಜ್ಯಮಟ್ಟದಲ್ಲಿ ಪ್ಲೈವುಡ್ ಕಾರ್ಮಿಕರು ಸಂಘಟನೆಯಾಗುವುದರ ಪ್ರಾಮುಖ್ಯತೆ; ಕೈಗಾರಿಕಾವಾರು ಸಮನ್ವಯ ಸಮಿತಿಯ ರಚನೆಯ ಮಹತ್ವ ಮತ್ತು ಸಂಯುಕ್ತ ಹೋರಾಟದ ಕುರಿತು ಮಾತನಾಡಿದರು.

ಇತ್ತೀಚೆಗೆ ಕರ್ನಾಟಕ ಸರಕಾರವು ಪ್ಲೈವುಡ್ ಕಾರ್ಮಿಕರಿಗೆ ಕನಿಷ್ಠ ವೇತನದ ಕುರಿತು ಹೊರಡಿಸಿದ ಕರಡು ಪ್ರಕಟಣೆಗೆ, ಆಯಾಯ ಯೂನಿಯನ್‌ಗಳ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಿ, ತಿಂಗಳಿಗೆ ರೂಪಾಯಿ 500/- ಕನಿಷ್ಠ ವೇತನವನ್ನಾಗಿ ಹೆಚ್ಚಿಸಿ, ಕೂಡಲೇ ಜಾರಿಮಾಡಬೇಕೆಂದೂ, ಕೆಲಸದ ವರ್ಗೀಕರಣವನ್ನು (ಕ್ಲಾಸಿಫಿಕೇಶನ್) ಸರಿಪಡಿಸಬೇಕೆಂದೂ ಸರಕಾರವನ್ನು ಒತ್ತಾಯಿಸಲು ನಿರ್ಧರಿಸಲಾಯಿತು. ಇದಕ್ಕೆ ಸಂಬಂಧಪಟ್ಟ ಹೋರಾಟವನ್ನು ರೂಪಿಸಲು ನಿರ್ಣಯ ಕೈಗೊಳ್ಳಲಾಯಿತು.

ರಾಜ್ಯದ ಐದು ಪ್ಲೈವುಡ್ ಕಾರ್ಖಾನೆಗಳ ಒಟ್ಟು ಹನ್ನೊಂದು ಮಂದಿ ಇರುವ ಒಂದು ರಾಜ್ಯಮಟ್ಟದ ಸಂಘಟನಾ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಸಂಚಾಲಕರಾಗಿ ಕಾಂ. ಕೆ. ಶಂಕರ್‌ರವರನ್ನು ಆಯ್ಕೆಮಾಡಲಾಯಿತು.

○

ಬೇಡಿಕೆ ದಿನ

ತಮ್ಮ ಕೆಲವು ಬೇಡಿಕೆಗಳಿಗೋಸ್ಕರ ಒತ್ತಾಯಿಸಿ ದಿನಾಂಕ 16-9-81ರಂದು ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಲ್ಲಿ ವಿದ್ಯಾರ್ಥಿಗಳು ಬೇಡಿಕೆದಿನ ಆಚರಿಸಿದರು.

ಸ್ಥಳೀಯ ಸರಕಾರಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ಹೊರಡಿಸಿದ್ದರು. ಮೆರವಣಿಗೆಯ ನೇತೃತ್ವವನ್ನು ಎಸ್. ಎಫ್. ಐ.ನ ಕಾಂ. ಸೈಮನ್ ಮತ್ತು ಕಾಂ. ಡಿ.ಎಸ್. ಸದಾನಂದ ವಹಿಸಿದ್ದರು.

ಕಳೆದ ಹಲವಾರು ತಿಂಗಳಿಂದ ಉಪ್ಪಿನಂಗಡಿಯ ಹೈಸ್ಕೂಲಿನಲ್ಲಿ ಅಧ್ಯಾಪಕರುಗಳು ಮತ್ತು ಕಾಲೇಜನ್ನು ನಡೆಸಲು ಪ್ರಿನ್ಸಿಪಾಲರು ಇಲ್ಲವಾಗಿದ್ದು ವಿದ್ಯಾರ್ಥಿಗಳ ಭವಿಷ್ಯ ಚಿಂತಾಜನಕವಾಗಿದೆ. ಈ ಪರಿಸ್ಥಿತಿಯನ್ನು ವಿದ್ಯಾರ್ಥಿಗಳು ಪ್ರತಿಭಟಿಸಿ ತರಗತಿಗಳನ್ನು ಬಹಿಷ್ಕರಿಸಿದ್ದರು.

ನಂತರ ಉಪ್ಪಿನಂಗಡಿಯ ಬಸ್ ನಿಲ್ದಾಣದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಸೈಮನ್, ಸದಾನಂದ ಮತ್ತು ಕಾಂ. ಅಶ್ರಫ್ ಮೊದಲಾದವರು ಮಾತನಾಡಿ ತಮ್ಮ ಹೋರಾಟಕ್ಕೆ ಸಾರ್ವಜನಿಕರ ಬೆಂಬಲ ಕೋರಿದರು.

ಸಂಘಟನಾ ಪ್ರಜ್ಞೆ ಬೆಳೆಸಲು ಮಹಿಳೆಯರಿಗೆ ಕರೆ

ಮಹಿಳೆಯರ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಮಹಿಳೆಯರಿಗೆ ಮಾತ್ರವೇ ಸಾಧ್ಯವಾಗಬಲ್ಲದು. ಸಮಾಜದಲ್ಲಿ ಗೌರವದಿಂದ ಬಾಳಬೇಕಾದರೆ ಮಹಿಳೆಯರು ಸಂಘಟಿತರಾಗಿ, ತಮ್ಮ ಹಕ್ಕುಗಳ ರಕ್ಷಣೆಗಾಗಿಯೂ, ಸಮಸ್ಯೆಗಳ ಪರಿಹಾರಕ್ಕಾಗಿಯೂ ಹೋರಾಟ ನಡೆಸುವುದು ಅಗತ್ಯವೆಂದು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯಸಮಿತಿ ಅಧ್ಯಕ್ಷೆ ಶ್ರೀಮತಿ ದೇವಕಿ ವಾರಿಯರ್ ಮಹಿಳೆಯರಿಗೆ ಕರೆ ನೀಡಿದ್ದಾರೆ. ಅವರು ಸೆಪ್ಟೆಂಬರ್ 13ರಂದು ನಗರದ ಗಣಪತಿ ಜ್ಯೂನಿಯರ್ ಕಾಲೇಜಿನಲ್ಲಿ ಜರುಗಿದ ಮಂಗಳೂರು ತಾಲ್ಲೂಕಿನ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಶ್ರೀಮತಿ ಎ. ಯಮುನ ಅವರು ವಹಿಸಿದ್ದರು. ಮಹಿಳಾ ಸಂಘಟನೆಯ ಕಾರ್ಯಕರ್ತೆ ಕುಮಾರಿ ಸುಶೀಲಾ ಭಾಷಣ ಮಾಡುತ್ತಾ ಮಹಿಳೆಯರ ಸಮಸ್ಯೆಗಳನ್ನು ವಿವರಿಸಿದರು.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮಂಗಳೂರು ತಾಲ್ಲೂಕು ಸಮಿತಿಗೆ ಅಧ್ಯಕ್ಷೆಯಾಗಿ ಶ್ರೀಮತಿ ಎ. ಯಮುನ, ಉಪಾಧ್ಯಕ್ಷೆಯಾಗಿ ಶ್ರೀಮತಿ ಪ್ರತಿಮಾಶೆಟ್ಟಿ, ಕಾರ್ಯದರ್ಶಿಯಾಗಿ ಕುಮಾರಿಆಶಾ ಕೆ.ಸನಿಲ್, ಜತೆ ಕಾರ್ಯದರ್ಶಿಯಾಗಿ ಕುಮಾರಿ ಎಂ.ಮೀನಾಕ್ಷಿ, ಕೋಶಾಧಿಕಾರಿಯಾಗಿ ಕುಮಾರಿ ಪಿ. ಮೀನಾಕ್ಷಿ ಇವರನ್ನು ಅವಿರೋಧವಾಗಿ ಆರಿಸಲಾಯಿತು.

ಆರಂಭದಲ್ಲಿ ಕುಮಾರಿ ಆಶಾ ಕೆ. ಸನಿಲ್ ಸ್ವಾಗತಿಸಿದ್ದರು. ಕೊನೆಯಲ್ಲಿ ಕುಮಾರಿ ಸಂಧ್ಯಾರಾವ್ ವಂದನಾರ್ಪಣೆ ಮಾಡಿದರು.

●

ಧರಣಿ ಸತ್ಯಾಗ್ರಹ

ದಿನಾಂಕ 21-9-1981 ರಂದು ಕೃಷಿಕೂಲಿಕಾರರು ಶಿಡ್ಲಘಟ್ಟದಲ್ಲಿ ಬಿ. ಡಿ. ಓ. ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ತಾಲ್ಲೂಕಿನಲ್ಲಿ ತೀವ್ರ ಅಭಾವ ಪರಿಸ್ಥಿತಿಯಿದ್ದು ರಿಲೀಫ್ ಕಾಮಗಾರಿ ಕೆಲಸಮಾಡುತ್ತಿರುವ ಕೂಲಿಕಾರರಿಗೆ ವಾರಕ್ಕೊಮ್ಮೆ ಕೂಲಿ ಬಟವಾಡೆ ಮಾಡದೇ, ತಿಂಗಳುಗಟ್ಟಲೆ ಸತಾಯಿಸುತ್ತಿದ್ದು, ನಿಗದಿಯಾದ ಕೂಲಿಗೆ ಬದಲಾಗಿ ಬಿ. ಡಿ. ಓ. ಮತ್ತು ಜ್ಯೂನಿಯರ್ ಇಂಜಿನೀಯರ್ ಇವರೆಲ್ಲಾ ಸೇರಿ ತಮ್ಮ ಇಷ್ಟಾನುಸಾರ ಕೂಲಿ ಕಡಿತ ಮಾಡುತ್ತಿರುವುದನ್ನು ಪ್ರತಿಭಟಿಸಿ ಈ ಧರಣಿ ಸತ್ಯಾಗ್ರಹ ನಡೆಯಿತು.

ಧರಣಿ ಸತ್ಯಾಗ್ರಹಕ್ಕೆ ಮುನ್ನ ಕಾಂ. ಕೆ. ವೆಂಕಟೇಶ'ರ ನಾಯಕತ್ವದಲ್ಲಿ ಮತಪ್ರದರ್ಶನ ನಡೆಸಲಾಯಿತು.

ತೀವ್ರವಾಗಿ ಸೂಕ್ತಕ್ರಮ ಕೈಗೊಳ್ಳಲು ಮುಖ್ಯಮಂತ್ರಿ, ಕಂದಾಯ ಮಂತ್ರಿಗಳಿಗೆ ಮನವಿ ಕಳಿಸಿ ಒತ್ತಾಯಿಸಲಾಯಿತು.

ಗಮನಿಸಿ

ಕಳೆದ ವಾರ (20-9-81)ದ ಪತ್ರಿಕೆಯ 2ನೇ ಪುಟದಲ್ಲಿ "ಬೇಡಿಕೆಗಳ ಸಲ್ಲಿಕೆ" ಎಂಬ ಶಿರೋನಾಮೆಯಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು. ಸಭೆ ನಡೆದ ಸ್ಥಳ ಕೈಬಿಟ್ಟು ಹೋಗಿತ್ತು. ಮೈಸೂರು ಪೆಟ್ರೋಕೆಮಿಕಲ್ಸ್ ಎಂಪ್ಲಾಯೀಸ್ ಯೂನಿಯನ್ ಸಭೆ ನಡೆದದ್ದು ರಾಯಚೂರಿನಲ್ಲಿ.

ಇದೇ ಸಂಚಿಕೆಯ 7ನೇ ಪುಟದಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ಎಂಬ "ಶಿರೋನಾಮೆ"ಯ ಸುದ್ದಿಯಲ್ಲೂ ಸಮ್ಮೇಳನ ನಡೆದ ಸ್ಥಳ ಕೈಬಿಟ್ಟು ಹೋಗಿತ್ತು. ತಾಲ್ಲೂಕು ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದದ್ದು ದೊಡ್ಡಬಳ್ಳಾಪುರದಲ್ಲಿ.

○

ನಿಧನ

ಸ್ವಾತಂತ್ರ್ಯಪೂರ್ವದಿಂದಲೂ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿದ್ದ, ಪಕ್ಷ ಇಬ್ಭಾಗವಾದ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಷ್ಠಾವಂತ ಹಿತೈಷಿಯಾಗಿದ್ದ ಶ್ರೀ ಶೀನ ಸಾಲಿಯಾನ್ ಅವರು 7-9-81ರಂದು ತಮ್ಮ 54ನೇ ಪ್ರಾಯದಲ್ಲಿ ನಿಧನರಾಗಿದ್ದಾರೆ.

ಐಕ್ಯರಂಗವು ಶೀನ ಸಾಲಿಯಾನ್‌ರ ನಿಧನಕ್ಕಾಗಿ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಮತಾಂತರ ಕುರಿತು ವಿಚಾರಗೋಷ್ಠಿ

"ಮತಾಂತರ ದಲಿತರ ಕ್ರಾಂತಿಕಾರಿ ಹೋರಾಟವನ್ನು ನೋಂದಿಸುವ ಅಗ್ನಿಶಾಮಕ, ಮತಾಂತರವನ್ನು ವಿರೋಧಿಸಿರಿ". ಇದು 13-9-81 ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ದ. ಸಂ. ಸ. ಆಶ್ರಯದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮೂಡಿಬಂದ ದಲಿತರ ಒಟ್ಟಾಭಿಪ್ರಾಯ.

ಈ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಬಂಡಾಯ ಸಾಹಿತಿ ದೇವಯ್ಯ ಹರವೆ ಅವರು ವಹಿಸಿದ್ದರು. "ಮತಾಂತರ ಜಾತ್ಯಾತೀತ ಭಾರತಕ್ಕೊಂದು ಸವಾಲು" ಎಂಬ ವಿಷಯದ ಕುರಿತು ಪುರುಷೋತ್ತಮ ಬಿಳಿಮಲೆ ಅವರು ಮಂಡಿಸಿದರು. "ದಲಿತರ ಮತಾಂತರ–ಸಮಸ್ಯೆಗಳು" ಈ ವಿಷಯವನ್ನು ದ. ಕ. ಜಿಲ್ಲಾ ದ. ಸಂ. ಸ. ಸಂಚಾಲಕ ಬಿ. ರಾಮಕೃಷ್ಣ ಮಂಡಿಸಿದರು. ಮಂಗಳೂರಿನ ಸರಕಾರಿ ಕಾಲೇಜಿನ ಅಕೆಡೆಮಿಕ್ ಹಾಲ್‌ನಲ್ಲಿ ಪ್ರೇಕ್ಷಕರಿಂದ ತುಂಬಿ ನಡೆದ ಈ ವಿಚಾರಗೋಷ್ಠಿ ವಿದ್ಯಾವಂತ ದಲಿತರಲ್ಲಿ ಹೊಸ ಸ್ಫೂರ್ತಿಯನ್ನೀಯುವಲ್ಲಿ ಪರಿಣಾಮಕಾರಿಯಾಯಿತು. 25 ಜನರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಪುರುಷೋತ್ತಮ ಬಿಳಿಮಲೆಯವರು ತಮ್ಮ ಪ್ರಬಂಧ ಮಂಡಿಸುತ್ತಾ "ಭಾರತದಲ್ಲಿರುವ ಅತೀವ ಜಾತೀಯತೆ, ಭೂಮಾಲೀಕರ ದಬ್ಬಾಳಿಕೆ, ಅಪಮಾನ-ಅನ್ಯಾಯಗಳಿಂದ ನೊಂದ ದಲಿತರು ಈಗ ತಮಗೆ ರಕ್ಷಣೆ ದೊರಕುವಲ್ಲಿ ಹೋಗುವದರಲ್ಲಿ ತಪ್ಪೇನೂ ಇಲ್ಲ. ಭಾರತದ ಜಾತೀಯವಾದಿಗಳು ದಲಿತರನ್ನು ಚರಿತ್ರೆಯುದ್ದಕ್ಕೂ ಹೀನಾಯವಾಗಿ ನೋಡಿಕೊಂಡು ಬಂದಿದ್ದಾರೆ. ಮತಾಂತರ ಭಾರತಕ್ಕೇನೂ ಹೊಸತಲ್ಲ. ಇದರಲ್ಲಿ ವಿದೇಶಿ ಕೈವಾಡವೂ ಇರಬಹುದು. ಆದರೆ ಜಾತಿವಾದಿಗಳಾದ ವಿಶ್ವ ಹಿಂದೂ ಪರಿಷತ್, ಹಿಂದೂಮಹಾಸಭಾ, ಆರ್. ಎಸ್. ಎಸ್. ನವರ ಹೇಳಿಕೆಯಂತೆ ಅರಬ್ಬರ ಹಣದ ಆಮಿಷವೇ ಮತಾಂತರಕ್ಕೆ ಮುಖ್ಯಕಾರಣವಲ್ಲ" ಎಂದರು.

"ದಲಿತರ- ಮತಾಂತರ-ಸಮಸ್ಯೆಗಳು" ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿದ ಬಿ. ರಾಮಕೃಷ್ಣನವರು "ಮತಾಂತರವು ದಲಿತರ ಹೋರಾಟದ ಕ್ರಾಂತಿಕಾರೀ ಮನೋಭಾವಕ್ಕೆ ಮಾರಕವಾಗಿದೆ. ದಲಿತರು ಯಾವದೇ ಮತ-ಜಾತಿಯನ್ನು ತ್ಯಜಿಸುವದರಿಂದ ಇಲ್ಲವೇ ಸ್ವೀಕರಿಸುವದರಿಂದ ಯಾವದೇ ಮೂಲಭೂತ ಸಮಸ್ಯೆಗಳು ಪರಿಹಾರವಾಗಲಾರವು. ದಲಿತರಿಗೆ ಬೇಕಾಗಿರುವದು ಹೊಸಧರ್ಮವಲ್ಲ. ಬೇಕಾಗಿರುವುದು ಕನಿಷ್ಟಕೂಲಿ, ವಸತಿ, ಅನ್ನ, ಭೂಮಿ ಮತ್ತು ಮನಸ್ಸು ವಿಕಾಸವಾಗಲು ಯೋಗ್ಯ ಶಿಕ್ಷಣ. ಇದನ್ನು ಪೂರೈಸುವಲ್ಲಿ ಆಳುವವರ್ಗ ವಿಫಲಗೊಂಡಿರುವುದರಿಂದ ಮತ್ತು ಆಳುವವರ್ಗದ ರಾಜಕಾರಣಿಗಳು ನಿರಂತರವಾಗಿ ದಲಿತರಿಗೆ ಮೋಸಮಾಡುತ್ತಲೇ ಬಂದಿರುವುದರಿಂದ ಈ ಅವಾಂತರಕ್ಕೆಲ್ಲಾ ಕಾರಣ. ಇದನ್ನು ತಮ್ಮ ಅನುಕೂಲತೆಗೆ ಬಳಸಿಕೊಳ್ಳುವವರು ಸಾಮ್ರಾಜ್ಯಶಾಹಿಗಳು. ಇತಿಹಾಸಪೂರ್ವದಿಂದ ಬಡವರ ಹೆಸರಿನಲ್ಲಿ ಅನೇಕ ನಾಟಕಗಳು ನಡೆದು ಹೋಗಿವೆ. ಬುದ್ಧ, ಬಸವಣ್ಣ, ಅಂಬೇಡ್ಕರರಂಥ ವ್ಯಕ್ತಿಗಳು ದಲಿತರನ್ನು ವರ್ಗಸಂಘರ್ಷಕ್ಕೆ ತರಬೇತುಮಾಡಲೇ ಇಲ್ಲ. ಆಳುವ ವರ್ಗದ ಸಂಸ್ಕೃತಿ, ನಾಗರೀಕತೆಯಲ್ಲೇ ಒಂದು ರೀತಿ ಸುಧಾರಣೆ ತರಲು ಪ್ರಯತ್ನಿಸಿದರು. ಆದುದರಿಂದ ದಲಿತರು ತಮ್ಮನ್ನು ಕಿತ್ತು ತಿನ್ನುವ ಎಲ್ಲಾ ಜಾತಿ-ಧರ್ಮಗಳ ನಾಶಕ್ಕೆ ಸನ್ನದ್ಧರಾಗಲು ವರ್ಗಸಂಘರ್ಷಕ್ಕೆ ಅಣಿಯಾಗುವದೊಂದೇ ದಾರಿ" ಎಂದರು.

ಅಧ್ಯಕ್ಷಸ್ಥಾನದಿಂದ ಮಾತನಾಡಿದ ಶ್ರೀ ದೇವಯ್ಯಹರವೆಯವರು ಮಾತನಾಡುತ್ತಾ "ಮೊದಲಿನಿಂದಲೂ ಮೇಲ್ವರ್ಗದ ಜನ ದಲಿತರನ್ನು ಸುಶ

[ಕಡೇ ಪುಟ ನೋಡಿ]

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಕರ್ನಾಟಕ ರಾಜ್ಯದಲ್ಲಿ

-ಎನ್ಕೆ

ಕಾವೇರಿ ಜಲವಿವಾದ

ಕಾವೇರಿ ನದಿಯು ನೀರಿನ ಹಂಚಿಕೆಗೆ ಸಂಬಂಧಿಸಿದ ಪ್ರಶ್ನೆಯೊಂದು ಲೋಕಸಭೆಯಲ್ಲಿ ಎತ್ತಲ್ಪಟ್ಟಿತು.

"ಸೌಹಾರ್ದಯುತ ಇತ್ಯರ್ಥ ಸಾಧ್ಯವಾಗುವಂತೆ ಮಾಡುವ ಉದ್ದೇಶದಿಂದ ರಾಜ್ಯಗಳ ನಿಲುವಿನ ಬಗೆಗೆ ಚರ್ಚಿಸುವುದು ಯುಕ್ತವಲ್ಲ. ಡಿಸೆಂಬರಿನಲ್ಲಿ (1980) ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಕೈಕೊಂಡ ನಿರ್ಧಾರ ಅನುಸರಿಸಿ ವಿವಾದಕ್ಕೆ ಸಂಬಂಧಿಸಿದ ನಾಲ್ಕು ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಪುದುಚೇರಿಗಳು ತಂತಮ್ಮ ನಿಲುವುಗಳನ್ನು ಕೇಂದ್ರಕ್ಕೆ ಬರೆದು ತಿಳಿಸಿವೆ" ಎಂದು ಕೃಷಿ ಸಚಿವ ರಾವ್ ಬೀರೇಂದ್ರಸಿಂಗ್ ಅವರು ಸೂಕ್ಷ್ಮ ಉತ್ತರ ನೀಡಿದರು.

ನಮ್ಮ ಪಾಲಿನ ನದಿ ನೀರನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ನಮ್ಮ ರಾಜ್ಯದ ಕಾಂಗ್ರೆಸ್ ಸರಕಾರ ಎಷ್ಟು ಅಸಮರ್ಥವಾಗಿದೆಯೆಂಬುದಕ್ಕೆ ಕಾವೇರಿ ಜೀವಂತ ಉದಾಹರಣೆ. ಕೃಷ್ಣ, ಗೋದಾವರಿ ನದಿಗಳ ಕತೆಯೂ ಚಿಂತಾಜನಕ. ಗೋದಾವರಿ, ಕೃಷ್ಣ, ಕಾವೇರಿ ನದಿಗಳಿಂದ ಒಪ್ಪಂದಕ್ಕನುಸಾರವಾಗಿ ಮೀಸಲಾದ ನೀರನ್ನು ಉಪಯೋಗಿಸಿಕೊಂಡಿಲ್ಲ. ಎಷ್ಟು ವರ್ಷಗಳಲ್ಲಿ ಗೊತ್ತೆ? ಕಳೆದ 50 ವರ್ಷಗಳಲ್ಲಿ ತಿಳಿಯಿತೇ? ಗೋದಾವರಿ-ಕೃಷ್ಣೆಯರ ನೀರನ್ನು ಬಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳ ರೈತರು ಉಪಯೋಗಿಸಿಕೊಳ್ಳಬೇಕಾಗಿತ್ತು. ಕಾವೇರಿ ನೀರನ್ನು ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳ ಭೂಮಿಗೆ ಉಣಿಸಬೇಕಾಗಿತ್ತು. ಆಳುವ ಕಾಂಗ್ರೆಸ್ ಸರಕಾರ ಈ ನದಿಗಳ ನೀರನ್ನುಪಯೋಗಿಸಲು ಬೇಕಾದ ಸೂಕ್ತ ನೀರಾವರಿ ಅಣೆಕಟ್ಟು ಕಟ್ಟಿಕೊಳ್ಳಲು ಅಸಮರ್ಥವಾದುದರಿಂದ ರೈತರಿಗೆ ಲಾಭವಾಗಲಿಲ್ಲ, ಬವಣೆ ತಪ್ಪಲಿಲ್ಲ.

ಕಾಂಗ್ರೆಸ್ ಪಕ್ಷದೊಳಗಿನ ಗುಂಪುಗಾರಿಕೆ, ತಮ್ಮ ಭೂಮಿ ಮುಳುಗಬಾರದೆಂಬ ಸಂಕುಚಿತ ಭಾವನೆ, ತಮ್ಮ ನಿಶ್ಚಿತ ಮತಕ್ಷೇತ್ರಗಳ ಕೈಬಿಟ್ಟು ಹೋಗಬಾರದೆಂಬ ಆಸೆ, ತಮ್ಮ ಮತಕ್ಷೇತ್ರಕ್ಕೆ ಹೆಚ್ಚು ಲಾಭದಾಯಕವಾಗುವಂತೆ ಅಣೆಕಟ್ಟಿನ ಸ್ಥಳ ಬದಲಾಯಿಸಬೇಕೆಂಬ ಒತ್ತಾಯ-ಈ ಕಾರಣಗಳಿಂದಾಗಿ ಕೃಷ್ಣ ಮೇಲ್ದಂಡೆ ಯೋಜನೆ, ಹಾಗೆಯೇ ಕಾವೇರಿ ನದಿಯ ಹಾರಂಗಿ ಮೊದಲಾದ ಯೋಜನೆಗಳು ಆಮೆ ವೇಗದಲ್ಲಿ ನಡೆದಿವೆ. ಇದರ ಪರಿಣಾಮವೇನು? ಕರ್ನಾಟಕ ರಾಜ್ಯ ಒಪ್ಪಂದಕ್ಕನುಸರಿಸಿ ನೀರು ಬಳಸಿಕೊಂಡಿಲ್ಲವಾದುದರಿಂದ, ತನ್ನ ಪಾಲಿನ ನೀರನ್ನು ಬಿಟ್ಟುಕೊಡಬೇಕೆಂಬ ವಾದಗಳೆದ್ದಿವೆ. ಕಾವೇರಿ ನದಿ ನೀರು ಹಂಚಿಕೆಯ ಹೊಸ ಒಪ್ಪಂದದ ಮಾತುಕತೆಯಲ್ಲಿ ತಮಿಳನಾಡು ಸರಕಾರದ ವಾದ ಇದೇ. ಅದೇನೆಂದರೆ ನಿಮಗೆ ಸಲ್ಲತಕ್ಕ ನೀರನ್ನು ಬಳಸಿಕೊಳ್ಳುವ ಶಕ್ತಿ ನಿಮ್ಮಲ್ಲಿಲ್ಲದಿದ್ದರೆ, ಆ ನೀರನ್ನು ಸಮುದ್ರಕ್ಕೆ ಸೇರಿಸುವುದರಲ್ಲರ್ಥವೇನಿದೆ. ಆ ನೀರನ್ನು ಉಪಯೋಗಿಸಲು ನಮಗೆ ಅವಕಾಶ ಕೊಡಿ ಎಂಬ ವಾದ ತಮಿಳುನಾಡು-ಕೇರಳ ಸರಕಾರದ್ದಾಗಿದೆ. ಕಾವೇರಿ ನದಿಯು ತನ್ನ ಚಿಕ್ಕದೊಡ್ಡ ಉಪನದಿಗಳೊಂದಿಗೆ ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿ ಒಟ್ಟು 94,500 ಚ. ಕಿ. ಮೀ. ವಿಸ್ತೀರ್ಣವುಳ್ಳ ಜಲಾನಯನ ಪ್ರದೇಶವನ್ನು ಹೊಂದಿದೆ. ಅದರಲ್ಲಿ 2/5 ಭಾಗ ಕರ್ನಾಟಕದಲ್ಲಿದೆ. ಆದರೆ ಹರಿಯುವ ನೀರು ಕರ್ನಾಟಕದಲ್ಲಿ ಉತ್ಪನ್ನವಾಗುವ ಅಂಶ ಶೇ. 70ರಷ್ಟಿದೆಂದು ಅಂದಾಜು ಮಾಡಲಾಗಿದೆ.

1924ರಲ್ಲಿ ಆಗಿನ ಮದ್ರಾಸ್ ಮತ್ತು ಮೈಸೂರು ಸರಕಾರಗಳೊಳಗೆ ಕಾವೇರಿ ನದಿಯು ನೀರಿನ ಹಂಚಿಕೆಯ ಕುರಿತಾದ 50 ವರ್ಷಗಳ ಅವಧಿಯ ಒಪ್ಪಂದವೂ ಆಯಿತು. ಅದು 1974ರಲ್ಲಿ ಮುಗಿಯಿತು. ಅಂದಿನಿಂದಲೂ ಕರ್ನಾಟಕ, ತಮಿಳುನಾಡು-ಕೇರಳ ರಾಜ್ಯಗಳೊಳಗೆ ಇದರ ಪುನರ್ವಿಮರ್ಶೆ ಮತ್ತು ನದಿ ನೀರಿನ ಹಂಚಿಕೆಯ ಹೊಸ ಒಪ್ಪಂದದ ಮಾತುಕತೆಗಳಾಗುತ್ತಲಿವೆ.

ಕೃಷ್ಣರಾಜಸಾಗರ ಅಣೆಕಟ್ಟಿನ ಕೆಲಸ ಈ ಒಪ್ಪಂದಕ್ಕಿಂತ ಪೂರ್ವದಲ್ಲೇ ಕೈಗೊಳ್ಳಲಾಗಿತ್ತು (1911 ರಲ್ಲಿ ಪ್ರಾರಂಭವಾಗಿ 1931ರಲ್ಲಿ ಪೂರ್ತಿಯಾಗಿದೆ).

ಕಾವೇರಿ ನದಿಯುದ್ದಕ್ಕೂ ಇನ್ನೂ ಹಲವಾರು ಯೋಜನೆಗಳು ನಿರ್ಮಾಣವಾಗಬೇಕಾಗಿದೆ. ಹಾರಂಗಿ, ಕಂಬದಕಡ, ಕಬಿನಿ, ನುಗು, ಲಕ್ಷ್ಮಣ ತೀರ್ಥ, ಶಿವಸಮುದ್ರ, ಶಿಂಷಾ, ಹೇಮಾವತಿ, ಹೋಗೇನಕಲ್. ವಿದ್ಯುಚ್ಛಕ್ತಿ ಉತ್ಪಾದನೆಯ ಯೋಜನೆಗಳೂ ಇದರಲ್ಲಿ ಸೇರಿವೆ.

ಕಬಿನಿ ಜಲಾಶಯ ಮೈಸೂರು-ಮಂಡ್ಯ ಜಿಲ್ಲೆಗಳ 51,000 ಹೆಕ್ಟಾರ್ ಪ್ರದೇಶಕ್ಕೆ ನೀರು ಒದಗಿಸುತ್ತದೆ. ಕೆಲಸ ಮುಂದುವರಿದಿದೆ. ನುಗು ಅಣೆಕಟ್ಟು ಕೆಲಸ ಮುಗಿದಿದೆ. ಆದರೆ ಹಾರಂಗಿ, ಹೇಮಾವತಿ, ಚಿಕ್ಕಹೊಳೆ, ಸುವರ್ಣವತಿ, ಅರ್ಕಾವತಿ, ಕಂಬದಕಡ, ಹೆಬ್ಬಳ್ಳ ಯೋಜನೆಗಳು ಪೂರ್ತಿಯಾಗಿಲ್ಲ.

ಹಾರಂಗಿ, ಹೇಮಾವತಿ, ಕಂಬದಕಡ, ಕಬಿನಿ ಯೋಜನೆಗಳನ್ನು ಆದಷ್ಟು ತೀವ್ರ ಪೂರ್ತಿಗೊಳಿಸಬೇಕೆಂದು ಕಮ್ಯುನಿಸ್ಟ್ ಪಾರ್ಟಿ 25-30 ವರ್ಷಗಳಿಂದಲೂ ಆಗಿನ ಮೈಸೂರು, ಈಗಿನ ಕರ್ನಾಟಕ ಸರಕಾರಗಳ ಮೇಲೆ ಒತ್ತಾಯ ಮಾಡುತ್ತಲೇ ಬಂದಿತ್ತು.

ಕಾವೇರಿ ನದಿ ನೀರಿನ ಹಂಚಿಕೆಯ 1924ರ ಒಪ್ಪಂದದಂತೆ ಕರ್ನಾಟಕ ರಾಜ್ಯದ (ಅಂದಿನ ಮೈಸೂರು ರಾಜ್ಯದ) 1,10,000 ಎಕರೆ ಭೂಮಿಯನ್ನು ಕಾವೇರಿ ನದಿ ಗುಂಟ ಅಭಿವೃದ್ಧಿಗೊಳಿಸಬೇಕೆಂದಿತ್ತು. ಈ ಒಪ್ಪಂದಕ್ಕನುಸಾರವಾಗಿ ಹಾಸನ ಜಿಲ್ಲೆಯ ಹೇಮಾವತಿ ಯೋಜನೆಯ ಪ್ರಾಥಮಿಕ ಪರೀಕ್ಷಣೆ 1933ರಲ್ಲೇ ನಡೆದಿದ್ದರೂ 1961-66ರ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಿ ಅದಿನ್ನೂ ಮುಕ್ತಾಯದ ಹಂತ ಮುಟ್ಟಿಲ್ಲ.

ಇದರಂತೆಯೇ ಕೊಡಗು ಜಿಲ್ಲೆಯ ಹಾರಂಗಿ ಯೋಜನೆ (ಕೊಡಗು, ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳ 1,05,000 ಎಕರೆ ಭೂಮಿಗೆ ನೀರುಣಿಸುವ) ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾಗಿ ಕೊನೆಗೊಂಡಿಲ್ಲ.

ಮೈಸೂರು ಜಿಲ್ಲೆಯ ನುಗು ಯೋಜನೆ 1947ರಲ್ಲಿ ಪ್ರಾರಂಭವಾಗಿ 1963ರಲ್ಲಿ ಮುಗಿಯಿತು. ಹಾಗೆಯೇ ಇದೇ ಜಿಲ್ಲೆಯ ಕಬಿನಿ ಯೋಜನೆ 1958ರಲ್ಲಿ ಪ್ರಾರಂಭವಾಗಿ 63ರಲ್ಲೂ ಮುಗಿಯಲಿಲ್ಲ.

ಕೊಡಗು ಜಿಲ್ಲೆಯ ಕಂಬದಕಡ ಯೋಜನೆ 1961ರಲ್ಲಿ ಪ್ರಾರಂಭವಾಗಿ, ಮುಕ್ತಾಯ ಕಂಡಿಲ್ಲ.

311 ಲಕ್ಷ ರೂಪಾಯಿಯ 20,000 ಎಕ್ರೆಗೆ ನೀರುಣಿಸುವ ನುಗು, 320 ಲಕ್ಷ ರೂಪಾಯಿ ಖರ್ಚಿನ 30,000 ಎಕ್ರೆಗೆ ನೀರು ಒದಗಿಸುವ ಕಬಿನಿ ಯೋಜನೆಯುಷ್ಟೆ ಪೂರ್ಣಗೊಂಡಿದೆ.

1050 ಲಕ್ಷ ರೂ.ಯ ಹಾರಂಗಿ, 390 ಲಕ್ಷ ರೂ. ಹೇಮಾವತಿ, 170 ಲಕ್ಷ ರೂ. ಕಂಬದಕಡಯೋಜನೆಗಳು ಪೂರ್ಣಗೊಂಡಿಲ್ಲ.

ಕಾವೇರಿ ನೀರಿನ ಒಪ್ಪಂದ 1974 ರಲ್ಲಿ ಮುಕ್ತಾಯವಾಗುತ್ತದೆಂದು ತಿಳಿದರೂ ಕೂಡ ಆಗಿನ ಮೈಸೂರು, ಈಗಿನ ಕರ್ನಾಟಕ ಸರಕಾರ ಒಪ್ಪಂದ ಪ್ರಕಾರ ರಾಜ್ಯಕ್ಕೆ ಸಿಗತಕ್ಕ ನೀರನ್ನೆಲ್ಲ ಉಪಯೋಗಿಸಲು, ಪ್ರಥಮಪ್ರಾಶಸ್ತ್ಯ ಕೊಟ್ಟು ಮೇಲೆ ನಮೂದಿಸಿರುವ ಯೋಜನೆಗಳನ್ನೆಲ್ಲ ಪೂರೈಸಬೇಕೆಂಬ ಆತುರ ತೋರಿಸಲಿಲ್ಲ. ಆಯಾ ಪ್ರದೇಶದ ಜನರೂ ಹೋರಾಟ ನಡೆಸಲಿಲ್ಲ.

ಒಪ್ಪಂದದ ಪ್ರಕಾರ ಕೊಟ್ಟದ್ದನ್ನು ದಕ್ಕಿಸಿಕೊಳ್ಳುವ ಬುದ್ಧಿಮತ್ತೆ, ಆತುರತೆ ಕರ್ನಾಟಕದ ಆಳುವವರಿಗೆ ಇಲ್ಲದಿರುವಾಗ ಕಾವೇರಿ ನೀರನ್ನು ನಿರುಪಯೋಗಗೊಳಿಸದೆ, ಅದರ ಸದುಪಯೋಗವಾಗಬೇಕೆಂಬ ಉದ್ದೇಶದಿಂದ ತಮಿಳುನಾಡು, ಕೇರಳ ಸರಕಾರಗಳು ತಮ್ಮ ರಾಜ್ಯಗಳಲ್ಲಿ ಹೊಸ ಯೋಜನೆಗಳನ್ನು ತಯಾರಿಸಿವೆ ಮತ್ತು ಹೆಚ್ಚಿನ ಪಾಲು ಕೇಳುತ್ತಿವೆ.

ಅಧಿಕಾರಕ್ಕಾಗಿ ಕಚ್ಚಾಡುತ್ತಿರುವ, ಟ್ರಸ್ಟ್‌ಗಳ ಮೂಲಕ "ಬಡವರ ಉದ್ಧಾರಕ್ಕಾಗಿ" ಹಣಕೂಡಿಸುವ, ಬಡವರ ಉದ್ಧಾರವನ್ನೇ ಮೂಲ ಮಂತ್ರವನ್ನಾಗಿಟ್ಟುಕೊಂಡಿರುವ ಇಂದಿರಾ ಕಾಂಗ್ರೆಸ್ ಸರಕಾರ ಕಾವೇರಿ ಪ್ರದೇಶದ ಅಭಿವೃದ್ಧಿಗಾಗಿ, ರೈತರ ಹಿತಕ್ಕಾಗಿ ಯೋಜನೆಗಳನ್ನು ಕೈಗೊಂಡಿಲ್ಲ. ಕಾವೇರಿ ನೀರಿನ ಉಪಯೋಗ ಮಾಡಿಕೊಂಡಿಲ್ಲ. ಕಾಂಗ್ರೆಸ್ ಆಳಿಕೆಯ ಅಲಕ್ಷ್ಯತನದಿಂದ ಕರ್ನಾಟಕದ ರೈತರಿಗೆ ಹಾನಿಯಾಗಿದೆ. ಈ ಹಾನಿ ತುಂಬಿಕೊಳ್ಳಲು ಕಾಂಗ್ರೆಸ್ ವಿರುದ್ಧ ಹೋರಾಡಿ ಸರಕಾರ ಬದಲಿಸುವುದೇ ಒಂದೇ ದಾರಿ. ಆ ದಾರಿಯಲ್ಲಿ ಮುನ್ನಡೆಯೋಣ.

ರಾಜ್ಯೋತ್ಸವದೊಳಗಾಗಿ ಭೂಸುಧಾರಣೆ ಮುಕ್ತಾಯ

ಸಮಸ್ಯೆಗಳಿಗೆಲ್ಲ ಪರಿಹಾರ ಜನರ ಬಾಗಿಲಿಗೇ ತಲುಪಿಸಲಾಗುವುದು, ನವೆಂಬರ್ ಒಂದರೊಳಗೆ ಭೂಸುಧಾರಣೆ ಪೂರ್ಣಗೊಳಿಸಲಾಗುವುದು, 15000 ಸ್ಟೈಪೆಂಡರಿ ಪದವೀಧರರನ್ನು ಕಾಯಂಗೊಳಿಸಲಾಗುವುದು, ರಾಜ್ಯ ಸರಕಾರಿ ನೌಕರರ ಸಂಬಳ ಪುನರ್ವಿಮರ್ಶಿಸಲಾಗುವುದು- ಮುಖ್ಯಮಂತ್ರಿ ಗುಂಡೂರಾವ್, ಕಂದಾಯ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರ ಆಶ್ವಾಸನೆಗಳು.

ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆಯಂತೆಯೇ 1,20,000 ಅರ್ಜಿಗಳು ಭೂಸುಧಾರಣಾಕಾನೂನು ರೀತ್ಯಾ ಇತ್ಯರ್ಥವಾಗದೆ ಉಳಿದಿವೆ. ನವೆಂಬರ್ 1 ರೊಳಗಾಗಿ ಪೂರ್ತಿಗೊಳಿಸುವುದಾಗಿ ಹೇಳಿದ್ದಾರೆ. ಇದರ ಬಗ್ಗೆ ರಾಜ್ಯದಲ್ಲಿ 293 ಭೂ ನ್ಯಾಯ ಮಂಡಳಿಗಳು ಸಮರೋಪಾದಿಯಲ್ಲಿ ಅವಿರತವಾಗಿ ದುಡಿಯುತ್ತಿವೆ. ಈ ವರೆಗೆ ರಾಜ್ಯದ ಭೂನ್ಯಾಯ ಮಂಡಳಿಗಳ ಮುಂದೆ 8,70,416 ಅರ್ಜಿಗಳಿದ್ದು, 54,76,080 ಎಕರೆಗಳಿಗೆ ಸಂಬಂಧಿಸಿದ್ದವು. ಮಂತ್ರಿಗಳ ಹೇಳಿಕೆಯಂತೆ 6,64,323 ಅರ್ಜಿಗಳು ಇತ್ಯರ್ಥವಾಗಿದೆ. ಇದರಿಂದ 3,97,665 ಗೇಣಿದಾರರಿಗೆ, 16,42,854 ಎಕರೆ ಭೂಮಾಲೀಕತ್ವ ಪ್ರಾಪ್ತವಾಗಿದೆಯಂತೆ. ನವೆಂಬರ್ 1ರೊಳಗೆ ಎಲ್ಲ ಅರ್ಜಿಗಳನ್ನು ವಿಚಾರಮಾಡಿ ತೀರ್ಪಿತ್ತು ನವೆಂಬರ್ 2ರಂದು ಭೂನ್ಯಾಯ ಮಂಡಳಿಗಳನ್ನೆಲ್ಲ "ಬುಂಡಲ" ಮಾಡುವ ಯೋಜನೆ ಗುಂಡೂರಾವ್ ಸರಕಾರ ಇಟ್ಟುಕೊಂಡಿದೆ. ಈ ಗುರಿಯನ್ನು ಸಾಧಿಸಲು ನಾಯಿಕೊಡೆಗಳಂತೆ ಹಲವಾರು ಭೂ ನ್ಯಾಯಮಂಡಳಿಗಳನ್ನು ರಚಿಸಿಯಾಗಿದೆ. ರ-ರ-ಇ-ಕ ತಿಳಿಯದ ಭೂಪರನ್ನೆಲ್ಲ ಈ ನ್ಯಾಯಮಂಡಳಿಗಳ ಸದಸ್ಯರನ್ನಾಗಿ ನೇಮಿಸಲಾಗಿದೆ. ಭೂ ಸುಧಾರಣಾ ಕಾಯಿದೆಯ ಒಂದಕ್ಷರವನ್ನೂ ಈಮಹಾಶಯರು ಓದಿರುವುದಿಲ್ಲ. ಇಂಥವರೆಲ್ಲ ಅರ್ಜಿಗಳನ್ನು ಅಭ್ಯಾಸಮಾಡಿ ತೀರ್ಪು ನೀಡುವ ನ್ಯಾಯಾಧೀಶರು. ಹೆಚ್ಚು ಭಾರವಾದ "ದಕ್ಷಿಣೆ" ಯಾರಿಂದ ಬಂದಿರುತ್ತದೋ ಅವರಿಗೇ "ನ್ಯಾಯ" ಕೊಡಿಸುವ ದಾನಿಗಳಿವರು. ಇಂಥ ನ್ಯಾಯವಾದಿಗಳಿಂದ ರೈತನಿಗೆ ಭೂಮಿಸಿಗಲು ಸಾಧ್ಯವೇ? ಆದ್ದರಿಂದಲೇ ಈ ಹೊತ್ತಿಗೆ 22000 ರಿಟ್‌ಗಳು ಹೈಕೋರ್ಟಿನಲ್ಲಿ ವಿಚಾರಣೆಗಾಗಿ ಕಾದಿವೆ. ಭೂ ಮಾಲಕರೂ, ರೈತರೂ ರಿಟ್ ದಾಖಲೆ ಮಾಡಿದ್ದಾರೆ. ಈ ರಿಟ್‌ಗಳ ಖುಲಾಸೆಗೆ ಕನಿಷ್ಟ 3 ರಿಂದ 5 ವರ್ಷ ಬೇಕು. ಹೈಕೋರ್ಟು ಬಹುತೇಕ ಅರ್ಜಿಗಳನ್ನು ಪುನರ್ವಿಚಾರಣೆ ಸಲುವಾಗಿ ಭೂ ನ್ಯಾಯಮಂಡಳಿಗಳಿಗೇ ವಾಪಸು ಕಳುಹಿಸಿಕೊಡುತ್ತಿದೆ. ಭೂ ನ್ಯಾಯಮಂಡಳಿಗಳು ಅವುಗಳನ್ನು ವಿಚಾರಿಸಿ ತೀರ್ಪಿತ್ತ ನಂತರ ಮತ್ತೆ ಹೈಕೋರ್ಟು ರಿಟ್. ಹೀಗಾಗಿ ರಾಯರ ಪುಣ್ಯದಿಂದ ಭೂ ನ್ಯಾಯ ಮಂಡಲಿ ಸದಸ್ಯರ ಆಶೀರ್ವಾದದಿಂದ ರೈತನೂ-ಭೂಮಾಲಕರೂ ಹಳ್ಳಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಹಳ್ಳಿಗೆ ತೀರ್ಥಯಾತ್ರೆ ಕೈಗೊಂಡು ಕಿಸೆಖಾಲಿಯಾದನಂತರ "ನಾವಿಬ್ಬರೂ ಇಲ್ಲೇ ನ್ಯಾಯ ಮುಗಿಸೋಣ" ವೆಂಬ ನಿರ್ಧಾರಕ್ಕೆ ಬಂದು ಖಾಜಿ ನ್ಯಾಯ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ.

ತ್ವರಿತ ಗತಿಯಲ್ಲಿ ಭೂ ನ್ಯಾಯ ಬಗೆಹರಿಸುವ ಕಾಂಗ್ರೆಸ್ ಸರಕಾರದ ವೈಖರಿ ಇದು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರ ಗುಂಡೂರಾವ್ ಸರಕಾರದಂತೆ ಭ್ರಷ್ಟ ಭೂನ್ಯಾಯ ಮಂಡಲಿಗಳ ಮೇಲೆ ವಿಶ್ವಾಸವಿಟ್ಟಿಲ್ಲ. ರೈತಸಂಘದ ಪ್ರತಿನಿಧಿಗಳನ್ನೊಳಗೊಂಡು ಅಧಿಕಾರಿಗಳು ಪ್ರತಿಯೊಂದು ಹಳ್ಳಿಗೆ ಹೋಗಿ ನೆರೆಕರೆಯ ಹೊಲದವರ ಸಾಕ್ಷಿ ಪಡೆದು ರೈತನಿಗೆ ಸ್ಥಳದಲ್ಲೇ ಪಟ್ಟಾವಿತರಣೆ

[7ನೇ ಪುಟ ನೋಡಿ]

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾತ್ವಿಕ ನಿಲುವೆ

ಇ. ಎಂ. ಎಸ್.

[ಮಲಯಾಳಂನ ಚಿಂತಾ ವಾರಪತ್ರಿಕೆಯಲ್ಲಿ ಕಾಂ. ಇ.ಎಂ.ಎಸ್.ರ ಈ ಲೇಖನವು ಪ್ರಕಟವಾಗಿತ್ತು. ಆ ಲೇಖನದ ಸಂಕ್ಷಿಪ್ತಾನುವಾದವನ್ನು ಕಾಂ. ಬಾವು ಒದಗಿಸಿದ್ದಾರೆ.]

1978 ಏಪ್ರಿಲ್ ತಿಂಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 10ನೇ ಅಧಿವೇಶನ ಜಲಂಧರ್‌ನಲ್ಲಿ ಸೇರಿದಾಗ ಅದು ತೆಗೆದುಕೊಂಡ ತೀರ್ಮಾನದಂತೆ ಅದೇ ವರ್ಷ ಡಿಸೆಂಬರ್ ತಿಂಗಳಲ್ಲಿ ಸಾಲ್ಕಿಯಾದಲ್ಲಿ ಅಖಿಲಭಾರತ ಪ್ಲೀನಮ್ ಸೇರಿ ಸಂಘಟನೆಯ ಬಗ್ಗೆ ಚರ್ಚಿಸಿ ಹಲವು ತೀರ್ಮಾನಗಳನ್ನು ಕೈಗೊಂಡಿತು. ಆಗಮಾತ್ರವೇ ಹತ್ತನೇ ಅಧಿವೇಶನದ ಚಟುವಟಿಕೆ ಪೂರ್ತಿಯಾದದ್ದು.

ಹೀಗೆ ಈ ನಾಲ್ಕು ವರ್ಷಗಳ ಕಾಲ ಜಲಂಧರ್-ಸಾಲ್ಕಿಯಾ ನಿರ್ಣಯಗಳನ್ನು ಜಾರಿಗೆ ತರುವುದಕ್ಕಾಗಿ ಕೇಂದ್ರಸಮಿತಿ ಹಾಗೂ ಕೆಳಹಂತದ ಸಮಿತಿಗಳು ಪೂರೈಸಿದ ಕಾರ್ಯಗಳು, ಈ ಕಾಲದಲ್ಲಿ ನಡೆದ ರಾಜಕೀಯ ಬದಲಾವಣೆಗಳು, ಅವುಗಳ ಬಗ್ಗೆ ಪಾರ್ಟಿ ತಾಳಿದ ನಿಲುವು-ಇವುಗಳನ್ನೆಲ್ಲಾ ಅವಲೋಕನೆಮಾಡಿ ಯುಕ್ತವಾದ ನಿರ್ಣಯಗಳನ್ನು ತೆಗೆದುಕೊಳ್ಳುವುದೇ ಮುಂಬರುವ 11ನೇ ಅಧಿವೇಶನದ ಕರ್ತವ್ಯ.

ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ಏಕೆ 11ನೇ ಅಧಿವೇಶನವೆಂದು ಕರೆಯುತ್ತೇವೆ? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರೂಪುಗೊಂಡ ಅಧಿವೇಶನವನ್ನು ಒಂದನೇ ಅಧಿವೇಶನವೆಂದೂ ಅದಾದನಂತರ ನಡೆದ ಅಧಿವೇಶನವನ್ನು ಎರಡು, ಮೂರು ಎಂದು ಕರೆಯುವುದು ಸರಿಯಲ್ಲವೆ?

ಇದಕ್ಕೆ ಉತ್ತರ ಸರಳ. ಪರಿಷ್ಕರಣವಾದಿಗಳಿಂದ ಬೇರೆಯಾಗಿ ಒಂದು ಸ್ವತಂತ್ರ ಪಾರ್ಟಿಯಾದ ನಂತರ ಹೊಸದಾಗಿ ರೂಪುಗೊಂಡದ್ದಲ್ಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಅರ್ಧ ಶತಮಾನಕ್ಕಿಂತ ಹೆಚ್ಚಿನ ಕಾಲ ಕೆಲಸ ಮಾಡಿದ ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲೂ ಒಂದಕ್ಕಿಂತ ಹೆಚ್ಚಿನ ವಿಭಿನ್ನ ವಿಚಾರಗಳು ಕಾಣಿಸಿಕೊಂಡಾಗ ಅವುಗಳ ಮಧ್ಯೆ ನಡೆದ ಹೋರಾಟವು ಒಂದು ವಿಶೇಷ ಘಟ್ಟದಲ್ಲಿ ನಿರ್ದಿಷ್ಟ ರೂಪ ಪಡೆದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವಾಯಿತು.

ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಆರನೇ ಅಧಿವೇಶನದ ನಂತರ ಉಂಟಾದ ವಿಭಜನೆಯ ಪರಿಣಾಮವೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ಕಲ್ಕತ್ತಾ-ಬಾಂಬೆಯ 6ನೇ ಅಧಿವೇಶನ.

ಅದಾದನಂತರ ಎರಡು ಪಕ್ಷಗಳ ಅಧಿವೇಶನಗಳು ಬೇರೆಬೇರೆಯಾಗಿ ಸೇರಿದರೂ ಅವುಗಳು ಸಂಯುಕ್ತ ಕಮ್ಯುನಿಸ್ಟ್ ಚಳುವಳಿಯ ಪರಂಪರೆ ಹಕ್ಕುಬಾಧ್ಯತೆಗಳನ್ನೇ ಮುಂದುವರಿಸುತ್ತಿವೆ.

ಹೀಗೆ ಸಂಯುಕ್ತ ಕಮ್ಯುನಿಸ್ಟ್ ಪಕ್ಷಗಳ ಪರಂಪರೆಯ ಹಕ್ಕು ಬಾಧ್ಯತೆಗಳನ್ನು ಹೊಂದಿರುವ ಈ ಎರಡು ಪಕ್ಷಗಳಲ್ಲದೆ ಇತರ ಹಲವು ಗುಂಪುಗಳ ನಡುವೆಯೂ ತೀವ್ರವಾದ ಹೋರಾಟ ನಡೆಯುತ್ತಿದೆ. ಆ ಹೋರಾಟದಲ್ಲಿ ತೊಡಗಿರುವ ಪಕ್ಷಗಳ ಹಾಗೂ ಗುಂಪುಗಳ ನ್ಯಾಯಾನ್ಯಾಯ, ಸರಿ ಮತ್ತು ತಪ್ಪುಗಳನ್ನು ಕಳೆದ 25 ವರ್ಷಗಳ ಕಾಲದ ಚರಿತ್ರೆಯ ಅನುಭವ ಪರಿಶೀಲನೆಗೊಳಪಡಿಸಿದೆ. ಈ ಅನುಭವಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುವೇ ಸರಿಯಾದದ್ದು ಎಂಬುದನ್ನು ಸ್ಪಷ್ಟಪಡಿಸಿದೆ. ಅವರವರ ತಾತ್ವಿಕ ನಿಲುವನ್ನು ಸ್ವಯಂ ಟೀಕೆಗೆ ಗುರಿಪಡಿಸುವುದು ಅಗತ್ಯವೆಂದಾದರೆ ಇದೀಗ ಭಾರತ ಕಮ್ಯುನಿಸ್ಟ್ ಪಕ್ಷ ಹಾಗೂ ನಕ್ಸಲ್ ಗುಂಪುಗಳು ಗೌರವಪೂರ್ಣವಾಗಿ ಸ್ವಯಂ ಟೀಕೆ ನಡೆಸಬೇಕಾದುದು ಅತ್ಯಗತ್ಯ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸ್ವಯಂಟೀಕೆಯ ಅವಶ್ಯಕತೆಯಿಲ್ಲವೆಂದೇನೂ ಇದರ ಅರ್ಥವಲ್ಲ. ಇದಕ್ಕೆ ಮುಂಚೆ ನಡೆದ ಪಕ್ಷದ ಅಧಿವೇಶನಗಳಲ್ಲೂ ತಾತ್ವಿಕ ಸ್ವಯಂ ಟೀಕೆ ನಡೆದಿದೆ. ಸಂಘಟನೆಯ ಬಗ್ಗೆ ಗೌರವಪೂರ್ಣವಾದ ಒಂದು ಸ್ವಯಂಟೀಕೆ ಸಾಲ್ಕಿಯಾ ಪ್ಲೀನಮ್‌ನಲ್ಲಿ ನಡೆಯಿತು. ಜಲಂಧರ್–ಸಾಲ್ಕಿಯಾ ಸಮ್ಮೇಳನದ ನಂತರ ಇದುವರೆಗೂ ಕೈಗೊಂಡ ಪಾರ್ಟಿ ತೀರ್ಮಾನಗಳನ್ನು 11ನೇ ಅಧಿವೇಶನದಲ್ಲಿ ಸ್ವಯಂಟೀಕೆಗೆ ಗುರಿಪಡಿಸಲಾಗುವುದು.

ಇದುವರೆಗೂ ನಡೆದ ಈ ಸೈದ್ಧಾಂತಿಕ ಹೋರಾಟಗಳ ಫಲವಾಗಿ ಪಕ್ಷ ಯಾವ ಧೋರಣೆಯನ್ನು ಕೈಗೊಂಡಿದೆ ಎಂಬುದನ್ನು ಪಕ್ಷದ ಕಾರ್ಯಕರ್ತರೂ, ಹಿತೈಷಿಗಳೂ ಅರಿತುಕೊಂಡರೆ ಮಾತ್ರ ಪಕ್ಷದ ಸರಿಯಾದ ಧೋರಣೆಯನ್ನು ಜಾರಿಗೆ ತರುವುದಕ್ಕೂ, ಅದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲೂ ಸಾಧ್ಯ. ಅದಕ್ಕೆ ಸಹಾಯವಾಗುವ ರೀತಿಯಲ್ಲಿ ಅಂತರರಾಷ್ಟ್ರೀಯ ರಂಗದ ಕುರಿತು ಪಕ್ಷದ ನಿಲುವನ್ನು ಸಂಕ್ಷಿಪ್ತವಾಗಿ ವಿವರಿಸುವುದೇ ಈ ಲೇಖನದ ಉದ್ದೇಶ.

ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ದೃಢವಾದ ನಂಬಿಕೆಯುಳ್ಳ ಯಾವುದೇ ಕಾರ್ಮಿಕವರ್ಗ ಕ್ರಾಂತಿಕಾರಿ ಪಕ್ಷದ ಧೋರಣೆಗೆ ಅಂತರರಾಷ್ಟ್ರೀಯ ರಂಗದಲ್ಲಿ ಬಂಡವಾಳಶಾಹಿ ಪದ್ಧತಿ ಹಾಗೂ ಸಮಾಜವಾದಿ ಪದ್ಧತಿಗಳ ನಡುವೆ ಕಳೆದ 60 ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ನಡೆಯುತ್ತಿರುವ ಹೋರಾಟವೇ ಅಡಿಪಾಯವಾಗಿರುತ್ತದೆ.

1917ರಲ್ಲಿ ಅಂದಿನ ಜಾರಿಸ್ಟ್ ರಷ್ಯಾ ಬಂಡವಾಳಶಾಹಿ ಜಗತ್ತಿನಿಂದ ಸ್ವಾತಂತ್ರ್ಯಪಡೆದು ಹೊಸ ಸಮಾಜವಾದದ ಜಗತ್ತಿಗೆ ನಾಂದಿಹಾಕಿದಂದಿನಿಂದಲೂ ಈ ಎರಡು ಸಿದ್ಧಾಂತಗಳ ನಡುವೆ ಸತತವಾದ ಹೋರಾಟಗಳು ನಡೆಯುತ್ತಲಿದೆ. ಆರ್ಥಿಕವಾಗಿಯೂ, ರಾಜಕೀಯವಾಗಿಯೂ, ಹಾಗೂ ಸೈನಿಕವಾಗಿಯೂ ಈ ರಂಗದಲ್ಲಿ ಹೋರಾಟಗಳು ನಿರಂತರವಾಗಿ ನಡೆಯುತ್ತಿವೆ.

ಇದರಲ್ಲಿ ನೀವು ಯಾವ ಕಡೆಗೆ ಎಂಬ ಪ್ರಶ್ನೆ ಮಾನವ ಸಮೂಹದ ಪ್ರತಿಯೊಬ್ಬ ವ್ಯಕ್ತಿಯ ಮುಂದೆಯೂ ಇದೆ. ಇದಕ್ಕೆ ಉತ್ತರ ಹೇಳದೆ ಎರಡು ಕಡೆಯಲ್ಲೂ ಇಲ್ಲ, ತಟಸ್ಥರು ಎಂದು ಹೇಳುವವರುಂಟು. ಆದರೆ ಅಂಥವರೂ ಕೆಲವು ಸಂದರ್ಭಗಳಲ್ಲಿ ಒಂದು ಪಕ್ಷಕ್ಕೂ ಮತ್ತೊಂದು ಸಂದರ್ಭದಲ್ಲಿ ಇನ್ನೊಂದು ಪಕ್ಷಕ್ಕೂ ಸೇರಬೇಕಾಗಿ ಬರುತ್ತದೆ. ಈ ನಿಲುವೆಯನ್ನೇ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳು, ವಿವಿಧ ಸೋಷಲಿಸ್ಟ್ ಗುಂಪುಗಳು ಕೈಗೊಳ್ಳುತ್ತವೆ. ಕಮ್ಯುನಿಸ್ಟರು ಮಾತ್ರ ಯಾವ ಮುಚ್ಚುಮರೆಯಿಲ್ಲದೆ ತಾವು ಸಮಾಜವಾದಿ ಬಣಕ್ಕೆ ಸೇರಿದವರೆನ್ನುವುದನ್ನು ಸ್ಪಷ್ಟವಾಗಿ ಘೋಷಿಸುತ್ತಾರೆ.

ಈ ಸೈದ್ಧಾಂತಿಕ ನಿಲುವೆಯನ್ನು ಅಂಗೀಕರಿಸಿದುದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಮೂಲೆಗೊತ್ತಲ್ಪಟ್ಟರೂ ಇದರಿಂದ ಪಾಠ ಕಲಿತು ಕಮ್ಯುನಿಸ್ಟ್ ಪಕ್ಷ ಬಲಿಷ್ಠವಾಗಿ ಬೆಳೆದಿದೆ.

ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಸಹೋದರ ಪಾರ್ಟಿಗಳ ಬಗ್ಗೆ ನಾವು ಸೌಹಾರ್ದಪೂರ್ವಕವಾದ ಆದರೆ ಅದೇ ವೇಳೆಗೆ ವಿಮರ್ಶನಾಪೂರ್ವಕವಾದ ನಿಲುವೆಯನ್ನು ತಳೆಯುವಂತೆ ನಮ್ಮ ಬಗ್ಗೆಯೂ ಅವರು ಅಂಥದೇ ನಿಲುವೆಯನ್ನು ತಾಳುತ್ತಾರೆಂದು ನಾವು ನಿರೀಕ್ಷಿಸೋಣ. ಸಹೋದರ ಪಾರ್ಟಿಗಳ ಹಾಗೂ ಅವರ ವಿಮರ್ಶೆಗಳಆಧಾರದಲ್ಲಿನಾವುನಮ್ಮ ಕುಂದು ಕೊರತೆಗಳನ್ನು ತಿದ್ದಿಕೊಳ್ಳಬಹುದು. ಅದೇ ಸಂದರ್ಭದಲ್ಲಿ ನಮ್ಮ ವಿಮರ್ಶೆಗಳನ್ನು ಅಂಗೀಕರಿಸದೆ ಸ್ವತಂತ್ರವಾಗಿ ಯೋಚಿಸಿ ಸ್ವಯಂ ತೀರ್ಮಾನ ತೆಗೆದುಕೊಳ್ಳಲು ಸಹೋದರ ಪಕ್ಷಗಳಿಗೆ ಅಧಿಕಾರವಿರುವಂತೆಯೇ ಅವರ ವಿಮರ್ಶೆಗಳ ಬಗ್ಗೆಯೂ ಸ್ವತಂತ್ರವಾದ ಪರಿಶೋಧನೆಯನ್ನು ನಡೆಸಿ ಸ್ವತಃ ತೀರ್ಮಾನತೆಗೆದುಕೊಳ್ಳಲು ನಮಗೂ ಹಕ್ಕಿದೆ.

ಹೀಗೆ ವಿಮರ್ಶೆ ಹಾಗೂ ಪರಸ್ಪರ ಸಹಾಯ ಮಾಡಿಕೊಂಡು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಮತ್ತು ಸಮಾಜವಾದಿ ಬಣದ ಐಕ್ಯವನ್ನು ಮುಂದುವರಿಸುವುದನ್ನೇ ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯತೆ ಎಂದು ನಾವು ಕರೆಯುವುದು.

ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಇಂದಿರುವ ಒಡಕನ್ನು ಬಗೆಹರಿಸಿ ರಷ್ಯಾ-ಚೀನಾ ದೇಶಗಳ ಪಕ್ಷಗಳನ್ನೊಳಗೊಂಡ ಕಮ್ಯುನಿಸ್ಟ್ ಚಳುವಳಿಯ ಒಗ್ಗಟ್ಟನ್ನು ಪುನಃಸ್ಥಾಪಿಸಲು ಪ್ರಯತ್ನಪಡುವುದು ಕ್ರಾಂತಿಕಾರಿ ಕಾರ್ಮಿಕ ಚಳುವಳಿಯ ಮುಂದಿರುವ ಬಹುಮುಖ್ಯವಾದ ಕರ್ತವ್ಯವಾಗಿದೆ.

1957 ಮತ್ತು 1960ರಲ್ಲಿ ಅಂಗೀಕರಿಸಿದ ಅಂತರ್‍ರಾಷ್ಟ್ರೀಯ ಸೈದ್ಧಾಂತಿಕ ಪ್ರಕಟಣೆಯಲ್ಲಿ ಒತ್ತಿಹೇಳಿದ ಹಾಗೆ ಒಂದುಕಡೆ ಪರಿಷ್ಕರಣವಾದ ಮತ್ತೊಂದು ಕಡೆ ಪಂಥವಾದ ಎಂಬೀ ಎರಡು ಕೊರತೆಗಳು ಜಾಗತಿಕ ಕಮ್ಯುನಿಸ್ಟ್ ಚಳುವಳಿಯನ್ನು ಬಾಧಿಸುತ್ತಿವೆ. ಈ ಎರಡು ಕೊರತೆಗಳು ಯಾವ ಪಕ್ಷದಲ್ಲಿ ಯಾವ ರೂಪದಲ್ಲಿ ಪ್ರತ್ಯಕ್ಷವಾಯಿತೆಂಬುದನ್ನು ಪರೀಕ್ಷಿಸುವುದಕ್ಕಿಂತ ವರ್ತಮಾನ-ಭವಿಷ್ಯದಲ್ಲಿ ಈ ಎರಡು ಕೊರತೆಗಳಿಂದ ಹೇಗೆ ವಿಮೋಚನೆ ಪಡೆಯಬಹುದೆಂಬುದೇ ಮುಖ್ಯ. ಇದರಲ್ಲಿ ಇತರ ಸಹೋದರ ಪಾರ್ಟಿಗಳೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ತನ್ನ ನಮ್ರ ಪಾತ್ರವಹಿಸುತ್ತದೆ.

ಪಾರ್ಲಿಮೆಂಟರಿ ಚಟುವಟಿಕೆಯ ಸಮಸ್ಯೆ

ಸಮಾಜದ ಬದಲಾವಣೆಗೆ ಪಾರ್ಲಿಮೆಂಟ್ ಹಾಗೂ ಪಾರ್ಲಿಮೆಂಟ್ ಚಟುವಟಿಕೆ ಅಲ್ಲದ ಮಾರ್ಗಗಳಿಗೆ ಇರುವ ಸ್ಥಾನದ ಬಗ್ಗೆ ಇಲ್ಲಿ ವಿವರಿಸಬೇಕಾಗಿದೆ.

ಶಾಂತಿಯುತವಾದಬದಲಾವಣೆಯ ಸಾಧ್ಯತೆಯನ್ನು ಅತಿಶಯೋಕ್ತಿಮಾಡಿ ಪ್ರಚಾರ ಮಾಡುವುದು, ಶಾಂತಿಯುತ ಮಾರ್ಗವನ್ನು ಪಾರ್ಲಿಮೆಂಟರಿಮಾರ್ಗವಾಗಿ ವ್ಯಾಖ್ಯಾನ ಮಾಡುವುದೇ ಪರಿಷ್ಕರಣವಾದಿಗಳ ತಪ್ಪು.

ಇದಕ್ಕೆ ವಿರುದ್ಧವಾಗಿ ಶಾಂತಿಯುತ ಮಾರ್ಗವನ್ನು ಕಾರ್ಯರೂಪಕ್ಕೆ ತರುವುದರ ಅವಶ್ಯಕತೆಯನ್ನೇ ತ್ಯಜಿಸುವುದು, ಕ್ರಾಂತಿಯ ಸಿದ್ಧತೆಯ ಒಂದು ಉಪಾಧಿಯಾಗಿ ಸಂಸತ್ ಕೆಲಸವನ್ನು ಉಪಯೋಗಿಸದೆ ಬಂದೂಕು ರಾಜಕೀಯವನ್ನು ಪ್ರಚಾರಮಾಡುವುದೇ ಪಂಥವಾದ.

ಈ ಎರಡೂ ವ್ಯಾಧಿಗಳು ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಪ್ರತ್ಯಕ್ಷವಾದವು. ವಿವಿಧ ಸಹೋದರ ಪಾರ್ಟಿಗಳು ಇದಕ್ಕೆ ಬಲಿಯಾದವು. ನಮ್ಮ ದೇಶದಲ್ಲಿ ಇವುಗಳಲ್ಲಿ ಒಂದರ ಪ್ರಭಾವ ಸಿ. ಪಿ. ಐ. ನಲ್ಲೂ ಮತ್ತೊಂದರ ಪ್ರಭಾವ ನಕ್ಸಲ್ ಗುಂಪುಗಳಲ್ಲೂ ಪ್ರತಿಧ್ವನಿಸಿತು. ಇದರ ಕೆಲವು ಅಂಶಗಳು ನಮ್ಮ ಪಕ್ಷದಲ್ಲೂ ತಲೆದೋರಿತ್ತು.

ಆದ್ದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಅಂಗೀಕರಿಸಿದಂತೆ ವರ್ಗಹೋರಾಟದಲ್ಲಿ ಹೆಚ್ಚುಹೆಚ್ಚಿಗೆ ಮಿತ್ರಶಕ್ತಿಗಳನ್ನು ಅಣಿಮಾಡಲು ವಿವಿಧ ಮಾರ್ಗಗಳಲ್ಲೊಂದಾಗಿ ಪಾರ್ಲಿಮೆಂಟರಿ ವೇದಿಕೆ (ಬಹುಮತಗಳಿಸಿದ ಕಡೆ ಸರ್ಕಾರ ರಚಿಸುವುದನ್ನೊಳಗೊಂಡು) ಸಹಾಯಮಾಡಿದೆಯೆಂಬುದನ್ನು ಅನುಭವ ವ್ಯಕ್ತಪಡಿಸಿದೆ.

ಈ ನಿಲುವಿನ ಫಲವಾಗಿಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಕಳೆದ 16 ವರ್ಷಗಳಲ್ಲಿ ಗಣನೀಯ ಪ್ರಗತಿಯನ್ನು ಮಾಡಲು ಸಾಧ್ಯವಾಯಿತು.

ಆದರೆ ಪಾರ್ಲಿಮೆಂಟರಿ ವೇದಿಕೆಯನ್ನು ಜನಸಾಮಾನ್ಯರ ಚಳುವಳಿಯನ್ನು ಬಲಪಡಿಸುವ ಒಂದು ಉಪಕರಣವಾಗಿ ಮಾತ್ರವೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪರಿಗಣಿಸಿದೆ. ಕೆಲವು ರಾಜ್ಯಗಳಲ್ಲಿ ಮಂತ್ರಿಮಂಡಳ ರಚಿಸುವುದು, ಪಂಚಾಯತಿಗಳಲ್ಲಿ ಅಧಿಕಾರ ವಹಿಸುವುದು-ಇವುಗಳನ್ನೆಲ್ಲಾ ಪಾರ್ಟಿ ಉಪಯೋಗಿಸುವುದು ಕಾರ್ಮಿಕ-ರೈತ ಜನಸಾಮಾನ್ಯರ ಹೋರಾಟದ ತೀವ್ರತೆಯನ್ನು ಹೆಚ್ಚಿಸುವುದಕ್ಕಾಗಿಯೇ.

ಇದಕ್ಕೆ ಬದಲಾಗಿ ದುಡಿಯುವ ಜನತೆಯ ಸಂಘಟಿತ ಚಳುವಳಿಯನ್ನು ಪಾರ್ಲಿಮೆಂಟರಿ ಚಟುವಟಿಕೆಗಿಂತ ಕೀಳಾಗಿ ಭಾವಿಸುವ ನಿಲುವೆಯನ್ನು ಬೂರ್ಷ್ವಾ, ಪೆಟಿಬೂರ್ಷ್ವಾ ಪಕ್ಷಗಳು ತಳೆಯುತ್ತವೆ. ಅದರ ಅಲೆಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಳಗೂ ಹೊಡೆಯಬಹುದು. ಇದಕ್ಕೆದುರಾಗಿ ನಿಕಾಂತ ಎಚ್ಚರವಹಿಸುವುದು ಎಲ್ಲಾ ಹಂತದಲ್ಲಿರುವ ಪಾರ್ಟಿ ಘಟಕಗಳ ಕರ್ತವ್ಯ.

ಒಂದು ಕಡೆ ಪರಿಷ್ಕರಣವಾದಕ್ಕೆ ಮತ್ತೊಂದು ಕಡೆ ಪಂಥವಾದಕ್ಕೆದುರಾದ ಸತತವಾದ ಹೋರಾಟದ ಮೂಲಕವೇ ಕಳೆದ ಹದಿನೇಳು ವರ್ಷಗಳ ಕಾಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಳೆದುಬಂದದ್ದು.

ಇದರ ಆರಂಭ 1964ರ ಏಳನೇ ಪಾರ್ಟಿ ಅಧಿವೇಶನದಲ್ಲೇ ಕಾಣ

ಬಹುದು. ಜಾಗತಿಕ ಕಮ್ಯೂನಿಸ್ಟ್ ಚಳುವಳಿಯಲ್ಲಿ ನಡೆದ ವಾದವಿವಾದಗಳಲ್ಲಿ ಸೋವಿಯೆಟ್ ರಷ್ಯಕ್ಕಿಂತ ಚೀಣಾದ ನಿಲುಮೆಯ ಕಡೆ ಪಕ್ಷಕ್ಕೆ ಹೆಚ್ಚಿನ ಒಲುಮೆ ಇದ್ದರೂ ಅಂತರರಾಷ್ಟ್ರೀಯ ಸಮಸ್ಯೆಯ ಬಗ್ಗೆ ಹೆಚ್ಚಿನ ವಿಶದವಾದ ಚರ್ಚೆಮಾಡದೆ ಯಾವ ನಿರ್ಣಯಕ್ಕೂ ಬರುವುದು ಸರಿಯಲ್ಲವೆಂದು ಪಕ್ಷ ತೀರ್ಮಾನಿಸಿತು. ಆದ್ದರಿಂದ ಇದರ ಬಗ್ಗೆ ಯಾವ ನಿರ್ಣಯವನ್ನೂ ಏಳನೇ ಪಾರ್ಟಿ ಅಧಿವೇಶನ ಕೈಗೊಳ್ಳಲಿಲ್ಲ.

ದೇಶೀಯರಂಗದಲ್ಲೂ ಚೀಣಾಧೋರಣೆಗೆ ಭಿನ್ನವಾದ ಒಂದು ನಿಲುಮೆ, ಪಾರ್ಟಿ ಕಾರ್ಯಕ್ರಮ ಹಾಗೂ ನಿರ್ಣಯಗಳನ್ನು ಏಳನೇ ಪಾರ್ಟಿ ಅಧಿವೇಶನ ಕೈಗೊಂಡಿತು. ಭಾರತದ ಕಾಂಗ್ರೆಸ್ ಪಕ್ಷ ಚೀಣಾದ ಕೂಮಿಂತಾಗ್ ಪಕ್ಷದ ಹಾಗೇ ಎಂಬ ಚೀಣಾದ ನಿಲುಮೆಯನ್ನು ನಮ್ಮ ಪಕ್ಷ ಅಂಗೀಕರಿಸಿದ ಕಾರ್ಯಕ್ರಮವು ಸ್ಪಷ್ಟವಾಗಿ ನಿರಾಕರಿಸಿತು. ಗುತ್ತೇದಾರಿ ಬಂಡವಾಳಶಾಹಿಯ ನಾಯಕತ್ವದಲ್ಲಿ ಬೂರ್ಜ್ವಾಹಿತವನ್ನು ಕಾಪಾಡುವ ಭಾರತ ಸರ್ಕಾರ ವರ್ಗಹಿತವನ್ನು ರಕ್ಷಿಸುವ ಸಲುವಾಗಿಯಾದರೂ ಕೆಲವು ಘಟ್ಟಗಳಲ್ಲಿ ಕೆಲವು ಸಮಸ್ಯೆಗಳ ಬಗ್ಗೆ ಅದು ಸಾಮ್ರಾಜ್ಯಶಾಹಿ ವಿರುದ್ಧವಾದ ನಿಲುಮೆ ತಾಳುವ ಸಂದರ್ಭಗಳಲ್ಲಿ ಕರಾರುವಾಕ್ಕಾದ ಬೆಂಬಲ ಸರ್ಕಾರಕ್ಕೆ ಕೊಡಲು ಹಿಂಜರಿಯುವುದಿಲ್ಲವೆಂದು ಪಕ್ಷದ ಕಾರ್ಯಕ್ರಮದಲ್ಲಿ ಹೇಳಿದೆ. ಅಷ್ಟೇ ಅಲ್ಲದೆ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ಜನಕೋಟಿಗಳನ್ನು ಸಿದ್ಧತೆ ಮಾಡುವುದರ ಭಾಗವಾಗಿ ಸಂಸತ್ ವೇದಿಕೆಯಲ್ಲಿ ಕೆಲಸ ಮಾಡುವುದೆಂದೂ ಈ ನಡುವೆ ನಮ್ಮ ಪಕ್ಷವೇ ಸರಕಾರ ರಚನೆ ಮಾಡಬೇಕಾಗಿ ಬಂದರೆ ಜನತೆಯ ಕೆಲವೊಂದು ಆಶೋತ್ತರಗಳನ್ನು ಈಡೇರಿಸುವ ಸಲುವಾಗಿ ಅದನ್ನು ಪೂರ್ಣವಾಗಿ ಉಪಯೋಗಿಸುವುದಾಗಿಯೂ ಪಾರ್ಟಿ ಕಾರ್ಯಕ್ರಮ ವ್ಯಕ್ತಪಡಿಸಿತು. ಇವೆಲ್ಲಾ ಚೀಣಾ ಪಕ್ಷದ ನಿಲುಮೆಗೆ ವಿರುದ್ಧವಾಗಿತ್ತು.

ಸಮಕಾಲೀನ ರಾಜಕೀಯ ಸಮಸ್ಯೆಗಳ ಬಗ್ಗೆ ಪಕ್ಷ ಕೈಗೊಂಡ ನಿರ್ಣಯಗಳು ಬೂರ್ಜ್ವಾ, ಭೂಮಾಲಕ ಆಡಳಿತಕ್ಕೆ ವಿರುದ್ಧವಾಗಿ ಜನತೆಯ ಐಕ್ಯತೆಯನ್ನು ಸಾಧಿಸುವ ಆಹ್ವಾನವಾಗಿತ್ತು. ಬಂಡವಾಳಶಾಹಿ ಭೂಮಾಲಕ ಆಡಳಿತನೀತಿಗಳು ಎಲ್ಲ ಪಕ್ಷಗಳಲ್ಲಿರುವ ಜನಸಾಮಾನ್ಯರನ್ನು ವ್ಯಾಪಕವಾದ ಹೋರಾಟಗಳಲ್ಲಿಳಿಸುವುದೆಂದೂ ಈ ಹೋರಾಟಗಳಿಗೆ ಸಂಘಟಿತವಾದ ರೂಪ ಕೊಡಬೇಕಾದದ್ದು ಪಾರ್ಟಿಯ ಕರ್ತವ್ಯವೆಂದೂ ಅದರಲ್ಲಿ ಸ್ಪಷ್ಟಪಡಿಸಿತು. ಆಡಳಿತ ಪಕ್ಷವಾದ ಕಾಂಗ್ರೆಸ್ಸಿನೊಂದಿಗೆ ಯಾವ ಐಕ್ಯವೂ ಸಾಧ್ಯವಿಲ್ಲವೆಂದೂ, ಜನರ ಸಾಮೂಹಿಕ ಚಳುವಳಿಯನ್ನು ಸಂಘಟಿಸುವಾಗ ಕಾಂಗ್ರೆಸ್ಸನ್ನು ಹೋಲುವ ಸಂಘಟನೆಗಳೊಂದಿಗೆ ಹೊಂದಾಣಿಕೆ ಮಾಡಬಹುದೆಂದೂ ಅದರಲ್ಲಿ ಸ್ಪಷ್ಟವಾಗಿ ಹೇಳಿತ್ತು.

ಹೀಗೆ ವ್ಯಾಪಕವಾದ ಜನತಾ ಹೋರಾಟಗಳ ಮೂಲಕ ಉದ್ಭವಿಸುವ ಐಕ್ಯವನ್ನು ರಾಜಕೀಯವಾಗಿ ಬೆಳೆಸಿ, ಇತರ ವಿರೋಧಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಧೋರಣೆಯೂ ಅದರಲ್ಲಿ ಅಡಗಿತ್ತು.

ಈ ಧೋರಣೆಯ ಮೇರೆಗೆ 1965 ಕೇರಳ ಚುನಾವಣೆ ಹಾಗೂ 1967ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಿಟ್ಟು ಇತರ ಪಕ್ಷಗಳೊಂದಿಗೆ ಐಕ್ಯರಂಗ ಕಟ್ಟಲು ಪಾರ್ಟಿ ಶ್ರಮಿಸಿತು. ಅದರಲ್ಲಿ ಮೊದಲನೆಯದು ಸೋಲಾಯಿತು. ಎರಡನೆಯದು ಒಂದು ಮಿತಿವರೆಗೂ ಯಶಸ್ವಿಗೊಂಡಿತು. ಹೀಗೆ ಬೆಳೆದುಬಂದ ಐಕ್ಯರಂಗ ಮತ್ತು ಸರ್ಕಾರಗಳು ಕುಸಿದುಬೀಳುವಾಗ ಆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಎದುರುಗೊಳ್ಳಲು ಪಾರ್ಟಿ ತೆಗೆದುಕೊಂಡ ಧೋರಣೆ ಸಹಾಯಮಾಡಿತು.

ನಮ್ಮ ಪಕ್ಷ 1970ರಿಂದ 1975-76ರ ವರೆಗೆ ಹೆಚ್ಚುಕಡಿಮೆ ಒಬ್ಬಂಟಿಯಾಗಿ ರಾಜಕೀಯ ಸಮಸ್ಯೆಗಳನ್ನು ಎದುರಿಸುವ ಒತ್ತಡಕ್ಕೊಳಗಾಯಿತು. ಈ ಕಾಲದಲ್ಲಿ ಪಾರ್ಟಿ ನಡೆಸಿದ ಸರಿತಪ್ಪುಗಳನ್ನು ಗುರುತಿಸಲು ಒಂದು ಸ್ವಯಂ ವಿಮರ್ಶೆಯ ಗೊತ್ತುವಳಿಯನ್ನು ಜಲಂಧರ್ ಅಧಿವೇಶನ ಅಂಗೀಕರಿಸಿದ್ದರಿಂದ ಅದರ ಬಗ್ಗೆ ಇಲ್ಲಿ ಹೇಳಬೇಕಾಗಿಲ್ಲ.

ಈ ಸ್ವಯಂವಿಮರ್ಶೆಯ ಗೊತ್ತುವಳಿಯ ಆಧಾರವಾಗಿ ಜಲಂಧರ್ ಅಧಿವೇಶನ ಅಂಗೀಕರಿಸಿದ ರಾಜಕೀಯ ನಿರ್ಣಯದಲ್ಲಿ ಎಡಪಂಥೀಯ ಪ್ರಜಾಪ್ರಭುತ್ವ ಶಕ್ತಿಗಳ ದೃಢವಾದ ಐಕ್ಯ ಮತ್ತು ಎಡಪಂಥೀಯ ಸ್ವಭಾವವಿಲ್ಲದ ಆದರೆ ಅಧಿಕಾರಶಾಹಿಯನ್ನು ವಿರೋಧಿಸಲು ಎಲ್ಲಾ ಶಕ್ತಿಗಳನ್ನು ಸಂಘಟಿಸುವ ಒಂದು ವಿಶಾಲ ವೇದಿಕೆಯೆಂಬ ಎರಡು ಧೋರಣೆಗಳು ಅಡಕವಾಗಿದ್ದವು. ಇವೆರಡರ ಮಧ್ಯೆ ವ್ಯತ್ಯಾಸವಿದೆ; ಪರಸ್ಪರ ಹೊಂದಾಣಿಕೆಯೂ ಇದೆ. ಒಂದು ಮತ್ತೊಂದಕ್ಕೆ ಸಹಾಯ ಮಾಡುತ್ತೆ. ಎರಡನ್ನೂ ಬೆಳೆಸಿ ಬಲಪಡಿಸಿದರೆ ಮಾತ್ರ ರೈತ–ಕಾರ್ಮಿಕ ಜನಸಾಮಾನ್ಯರನ್ನು ಅಧಿಕಾರಶಾಹಿಗೆದುರಾಗಿ ಮತ್ತು ಜನತಾ ಪ್ರಜಾಪ್ರಭುತ್ವರಂಗಕ್ಕೂ ಒಟ್ಟುಗೂಡಿಸಲು ಸಾಧ್ಯವೆಂದು ಪಾರ್ಟಿಯ ಅಧಿವೇಶನ ವ್ಯಕ್ತಪಡಿಸಿತು.

ಇಲ್ಲಿ ಒಂದು ಸಂಗತಿಯನ್ನು ವಿಶೇಷವಾಗಿತಿಳಿಸಬೇಕಾಗಿದೆ. ಇಂತಿಂತಹಪಕ್ಷ ಎಡಪಂಥೀಯ ಸ್ವಭಾವವುಳ್ಳದ್ದು, ಇಂತಿಂತಹ ಪಕ್ಷ ಅಧಿಕಾರಶಾಹಿ ವಿರುದ್ಧ ಸ್ವಭಾವವುಳ್ಳದ್ದು, ಇಂತಿಂತಹ ಪಕ್ಷ ಅಧಿಕಾರಶಾಹಿಯನ್ನು ಸ್ಥಾಪಿಸುವ ಪಕ್ಷ-ಈ ರೀತಿಯಲ್ಲಿ ಐಕ್ಯ ಹೋರಾಟಗಳಾಗಲಿ, ಐಕ್ಯರಂಗ ರಚಿಸುವುದಕ್ಕಾಗಲಿ ಪಾರ್ಟಿ ಪ್ರಯತ್ನಿಸುತ್ತಿಲ್ಲ.

ಆಡಳಿತವರ್ಗ ಅನುಸರಿಸುತ್ತಿರುವ ಧೋರಣೆಗಳ ದಿವಾಳಿಖೋರತನದಿಂದಾಗಿ ಎಲ್ಲಾ ಪಕ್ಷಗಳಲ್ಲಿನ ಜನಸಾಮಾನ್ಯರು ಅಧಿಕಾರಶಾಹಿ ವಿರುದ್ಧ ವೇದಿಕೆಗೂ ಹಾಗೂ ಎಡಪಂಥೀಯ ವೇದಿಕೆಗೂ ಬರುತ್ತಿದ್ದಾರೆ. ಆದರೆ ಅವುಗಳಲ್ಲಿ ಚಾಂಚಲ್ಯ ಮತ್ತು ಸಂಶಯಗಳು ತುಂಬಿವೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಯಾವುದೇ ಪಕ್ಷಕ್ಕೆ ಸೇರಿದವರಾಗಲಿ ಅಧಿಕಾರಶಾಹಿ ವಿರುದ್ಧ ಹಾಗೂ ಎಡ ಪಕ್ಷದ ಕಡೆ ಒಲುಮೆಯಿರುವವರೊಂದಿಗೆ ಸಹಕರಿಸುವುದು, ಯಾವುದೇ ಪಕ್ಷಕ್ಕೆ ಸೇರಿದವರಾಗಲಿ ಅಧಿಕಾರಶಾಹಿಗೆ ಬೆಂಬಲ ಕೊಡುವ ಮತ್ತು ಎಡಪಕ್ಷಕ್ಕೆ ವಿರುದ್ಧವಾದ ನಿಲುಮೆಯನ್ನು ತಾಳುವವರನ್ನು ಆ ವಿಷಯದಲ್ಲಿ ವಿರೋಧ ಮಾಡುವುದು—ಇದೇ ಪಾರ್ಟಿಯ ನಿಲುಮೆ.

ಇಂದಿನ ಪರಿಸ್ಥಿತಿಯನ್ನು ಅವಲೋಕನೆಮಾಡಿ ವಿವಿಧಹಂತಗಳಲ್ಲಿವಿವಿಧಪಕ್ಷಗಳೊಂದಿಗೆಸ್ಪಷ್ಟವಾದ ಕೆಲವು ವಿಷಯಗಳನ್ನು ಆಧಾರವಾಗಿಟ್ಟು ಐಕ್ಯ ಚಳುವಳಿಗೆ ಪಾರ್ಟಿ ತೀರ್ಮಾನಿಸಿರುವುದು ಈ ಆಧಾರದ ಮೇಲೆಯೇ.

ಉದಾಹರಣೆಗೆ ಭಾರತದದೇಶೀಯ ಸ್ವಾತಂತ್ರ್ಯಕ್ಕೆ ಹಾಗೂ ಗಡಿ ಭದ್ರತೆಗೂ ಅತಿದೊಡ್ಡ ಆಪತ್ತಿನ ಸನ್ನಿವೇಶವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಸೃಷ್ಟಿಸಿದೆ. ಪಾಕಿಸ್ತಾನಕ್ಕೆ ಆಯುಧಗಳನ್ನು ಕೊಡುವ ತೀರ್ಮಾನವು ಇದನ್ನು ಮತ್ತಷ್ಟು ಬಲಪಡಿಸಿದೆ. ಇದಕ್ಕೆ ವಿರುದ್ಧವಾದ ನೀತಿ ತಾಳುವ ಎಲ್ಲಾ ಪಕ್ಷದೊಂದಿಗೂ ಈ ಬಗ್ಗೆ ಸಹಕರಿಸಲು ಪಕ್ಷ ಸಿದ್ಧ. ಇದರಲ್ಲಿ ಇಂದಿರಾ ಕಾಂಗ್ರೆಸ್ಸನ್ನೂ ಪ್ರತ್ಯೇಕಿಸುವುದಿಲ್ಲ.

ಇಂತಹ ಸನ್ನಿವೇಶದಲ್ಲಿ ಭಾರತವನ್ನು ರಕ್ಷಿಸಬೇಕಾದುದು ಈ ಸರ್ಕಾರದ ವಿದೇಶ ನೀತಿಯಾಗಬೇಕು. ಸೋವಿಯೆತ್ ರಷ್ಯಾದೊಂದಿಗೆ ಇಂದಿರುವ ಸೌಹಾರ್ದತೆಯನ್ನು ಹಾಗೂ ನೆರವನ್ನು ಮುಂದುವರೆಸುವುದಷ್ಟೇ ಅಲ್ಲದೆ ಅದನ್ನು ಮತ್ತಷ್ಟು ಬಲಪಡಿಸುವುದು, ಇದಕ್ಕೆ ಹಾನಿಯಾಗದಂತೆ ಚೀಣಾ ಜೊತೆ ಸೌಹಾರ್ದತೆ ಹಾಗೂ ಸಹಕಾರದ ಸಂಬಂಧವನ್ನು ಬೆಳೆಸುವುದು ಭಾರತವನ್ನು ಇನ್ನಷ್ಟು ಬಲಪಡಿಸುತ್ತದೆ.

ಒಂದು ಕಡೆ ಸೋವಿಯತ್ ರಷ್ಯಾದೊಂದಿಗಿರುವ ಸಂಬಂಧವನ್ನು ಬಿಡಿಸಬೇಕೆಂದೂ, ಮತ್ತೊಂದು ಕಡೆ ಚೀಣಾದೊಂದಿಗೆ ಸೌಹಾರ್ದ ಸಂಬಂಧ ಏರ್ಪಡಿಸಿಕೊಳ್ಳಕೂಡದೆಂದೂ ಸರ್ಕಾರದ ಮೇಲೆ ಒತ್ತಾಯ ತರಲಾಗುತ್ತಿದೆ. ಈ ಒತ್ತಾಯವನ್ನು ವಿರೋಧಮಾಡಿ, ರಾಷ್ಟ್ರದ ಹಿತವನ್ನು ಕಾಪಾಡುವುದರ ಅವಶ್ಯಕತೆಯನ್ನು ಸಾರುವುದೇ ಪಕ್ಷದ ನಿಲುಮೆ.

ಆಂತರಿಕ ರಂಗದಲ್ಲಿ ಕಾರ್ಮಿಕ ರೈತಾಪಿ ಜನಸಾಮಾನ್ಯರು ಎದುರಿಸುತ್ತಿರುವ ಅತಿ ದೊಡ್ಡ ಆಪತ್ತೆಂದರೆ ಆಡಳಿತವರ್ಗದ ಅಧಿಕಾರಶಾಹಿ ಧೋರಣೆ. ಅದನ್ನು ತಡೆಗಟ್ಟಲು ಸಹಾಯವಾಗುವ ಎಲ್ಲಾ ಶಕ್ತಿಗಳೊಂದಿಗೆ ಸಹಕರಿಸಲು ಪಕ್ಷ ಸಿದ್ಧ. ಅದರಲ್ಲಿ ಯಾವುದೇ ಪಕ್ಷವನ್ನು ಬೇರ್ಪಡಿಸುವುದು ಸರಿಯಲ್ಲವೆಂದು ಪಾರ್ಟಿ ನಂಬುತ್ತದೆ.

ಅದೇ ಸಂದರ್ಭದಲ್ಲಿ ಅಧಿಕಾರಶಾಹಿ ವಿರುದ್ಧ ಹೋರಾಟದಲ್ಲಿ ಪರಿಮಿತವಾಗಿ ಭಾಗವಹಿಸಲು ಸಿದ್ಧವಾಗಿರುವ ಕೆಲವು ಪಕ್ಷಗಳು ದೇಶೀಯ ಐಕ್ಯತೆಗೆ ವಿರುದ್ಧವಾದ ರೀತಿಯಲ್ಲಿ ಛಿದ್ರಕಾರಿ ಶಕ್ತಿಗಳನ್ನು ಬೆಳೆಸಲು ಪ್ರಯತ್ನಿಸುತ್ತಿದೆ. ವಿದೇಶ ರಂಗದಲ್ಲಿ ಅವರು ಸಾಮ್ರಾಜ್ಯಶಾಹಿಗೆ ಅನುಕೂಲವಾದ ನಿಲುಮೆಯನ್ನು ತಾಳುತ್ತಾರೆ. ಆದುದರಿಂದ ಇಂತಹ ಪಕ್ಷಗಳೊಂದಿಗೆ ರಾಜಕೀಯ ಐಕ್ಯತೆ ಸಾಧ್ಯವಿಲ್ಲ.

ಇದರಲ್ಲಿ ಪ್ರತ್ಯೇಕವಾಗಿ ಹೇಳಬೇಕಾದ ಹೆಸರು ಬಿ. ಜೆ. ಪಿ. ಯದು. ಹಲವು ಸಂದರ್ಭಗಳಲ್ಲಿ ಬಿ.ಜೆ.ಪಿ.ಯ ಧೋರಣೆಯನ್ನೇ ಅನುಸರಿಸುತ್ತಿರುವ ಜನತಾ, ಲೋಕದಳ ಮುಂತಾದ ಪಕ್ಷದೊಳಗೆ ಅದಕ್ಕೆ ವಿರುದ್ಧವಾದ ಶಕ್ತಿಗಳೂ ಕೆಲಸಮಾಡುತ್ತಿದೆ. ಇದನ್ನು ಗಮನದಲ್ಲಿಟ್ಟು ಅಂತಹ ಪಕ್ಷಗಳಲ್ಲಿನ ಸಮಾನ ವಿಚಾರಧಾರೆಯಿರುವವರೊಂದಿಗೆ ಐಕ್ಯತೆಯಿಂದ ಕೆಲಸಮಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರಯತ್ನಿಸುತ್ತದೆ.

ಇವುಗಳಿಗಿಂತ ಪಕ್ಷಕ್ಕೆ ಹೆಚ್ಚಿನ ಹೊಂದಾಣಿಕೆಯಿರುವ ಪಕ್ಷಗಳೆಂದರೆ ಸಿ.ಪಿ.ಐ. ಮತ್ತು ಇತರ ಎಡಪಂಥೀಯ ಪಕ್ಷಗಳು. ಕೆಲವು ಸಮಸ್ಯೆಗಳಲ್ಲಿ ಒಮ್ಮತವಿಲ್ಲದಿದ್ದರೂ ಬಹುಮಟ್ಟಿಗೆ ಹೊಂದಾಣಿಕೆ ಇರುವ ಈ ಪಕ್ಷಗಳೊಂದಿಗೆ ಹೆಚ್ಚಿನ ಸಂಬಂಧವನ್ನು ಬೆಳೆಸಲು ನಮ್ಮ ಪಕ್ಷ ಪ್ರಯತ್ನಿಸುತ್ತಿದೆ. ಅದೇ ಸಂದರ್ಭದಲ್ಲಿ ಅಭಿಪ್ರಾಯ ಭಿನ್ನತೆಯಿರುವ ಮೂಲಭೂತ ಸಮಸ್ಯೆಗಳಲ್ಲಿ ಈ ಪಕ್ಷಗಳಿಂದ ಪ್ರತ್ಯೇಕವಾದ ನಿಲುಮೆಯನ್ನು ತಾಳಲು ಪಕ್ಷ ಹಿಂಜರಿಯುವುದಿಲ್ಲ.

ಈ ದೃಷ್ಟಿಕೋನದ ಆಧಾರದ ಮೇಲೆಯೇ ಜಲಂಧರ್-ಸಾಲ್ಕಿಯಾ ಸಮ್ಮೇಳನದ ನಂತರ ನಮ್ಮ ಪಕ್ಷ ಮುಂದುವರೆದಿದೆ. ಈ ಚಟುವಟಿಕೆಯ ಫಲವಾಗಿ ಉಂಟಾದ ಸಾಧನೆ ಹಾಗೂ ಕೊರತೆಗಳನ್ನು ವಸ್ತುನಿಷ್ಠವಾದ ಸ್ವಯಂ ಟೀಕೆಗೆ ಗುರಿಪಡಿಸಿ ಅವಶ್ಯಕವಾದ ತಿದ್ದುಪಡಿಗಳನ್ನು ಮಾಡುವ ಸಂದರ್ಭಗಳೇ ಮುಂದಿನ ಆರುತಿಂಗಳಕಾಲ ಪಕ್ಷದಾದ್ಯಂತ ನಡೆಸಬೇಕಾದ ರಾಜಕೀಯ ಚರ್ಚೆ.

ಜಲಂಧರ್ ಅಧಿವೇಶನದಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಕಾರ್ಯಗತಮಾಡಬೇಕಾದರೆ ಇಂದಿಗಿಂತ ಬಹುದೊಡ್ಡ ಜನಸಾಮಾನ್ಯರ ಪಕ್ಷವಾಗಿ ಬೆಳೆಯಬೇಕಾಗಿದೆ. ಈ ನಿಜಾಂಶವನ್ನು ಗುರುತಿಸಿದ್ದು ಜಲಂಧರ್ ಅಧಿವೇಶನದಲ್ಲೇ.

60 ಕೋಟಿಗಿಂತ ಹೆಚ್ಚಿನ ಜನಸಂಖ್ಯೆಯಿರುವ ಈ ದೇಶದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಸಂಘಟಿಸಲು ಕೇವಲ ಎರಡು ಲಕ್ಷ ಸದಸ್ಯರು ಮಾತ್ರ ಇರುವ ಅದರಲ್ಲೂ ಮುಕ್ಕಾಲುಭಾಗ ಎರಡು ರಾಜ್ಯಗಳಲ್ಲಿ ಮಾತ್ರ ಸೀಮಿತವಾಗಿದ್ದರೆ ಸಾಧ್ಯವಿಲ್ಲವೆಂಬುದು ಖಚಿತ. ಇಂದು ಪಕ್ಷ ದುರ್ಬಲವಾದ ರಾಜ್ಯಗಳಲ್ಲಿ, ಬಲಿಷ್ಠವಾದ ರಾಜ್ಯಗಳಲ್ಲೂ ದುರ್ಬಲವಾದ ಪ್ರದೇಶಗಳಲ್ಲಿ ಅದರ ಚಟುವಟಿಕೆ ಹೆಚ್ಚಿಸಬೇಕು. ಜನಸಾಮಾನ್ಯರ ಹೋರಾಟಗಳಲ್ಲಿ ಅತ್ಯಂತ ಆಸಕ್ತಿಯಿಂದ ಪಾಲುಗೊಳ್ಳುವ ಕಾರ್ಯಕರ್ತರಲ್ಲಿ ವರ್ಗಪ್ರಜ್ಞೆ ಹಾಗೂ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ ಅವರನ್ನು ಪಕ್ಷಕ್ಕೆ ಸೇರಿಸುವುದು ಮತ್ತು ಈಗ ಪಕ್ಷದಲ್ಲಿರುವವರ ಪ್ರಜ್ಞೆಯನ್ನು ಮತ್ತಷ್ಟು ಬೆಳೆಸುವುದರ ಮೂಲಕ ಮಾತ್ರ ಅಖಿಲ ಭಾರತ ಮಟ್ಟದಲ್ಲಿ ಕಟ್ಟಬೇಕಾದ ಎಡಪಂಥೀಯ- ಪ್ರಜಾಪ್ರಭುತ್ವರಂಗ, ವಿಶಾಲ ತಳಹದಿಯ ಅಧಿಕಾರಶಾಹಿ ವಿರೋಧಿ ವೇದಿಕೆ ಈ ಎರಡನ್ನೂ ಬೆಳೆಸಲು ಸಾಧ್ಯ.

ಇದರ ಬಗ್ಗೆ ಅನೇಕ ಪ್ರಾಯೋಗಿಕ ಸಮಸ್ಯೆಗಳನ್ನು ಕೂಲಂಕುಷವಾಗಿ ಅಭ್ಯಾಸಮಾಡಬೇಕು. ಪಕ್ಷದ ಕೇಂದ್ರ ಸಮಿತಿಯ, ರಾಜ್ಯಸಮಿತಿಯ ಹಾಗೂ ಕೆಳಗೆ ಶಾಖೆಯವರೆಗೂ ಪ್ರತಿಯೊಂದು ಹಂತದಲ್ಲೂ ನಡೆದ ಸಂಘಟನಾ ಚಟುವಟಿಕೆ ಸ್ವಯಂಟೀಕೆಯ ಮೂಲಕ ಪರಿಶೀಲನೆಗೊಳಗಾಗಬೇಕು. ಇದೆಲ್ಲವನ್ನೂ ಪಕ್ಷದ ಅಧಿವೇಶನದಲ್ಲಿ ಮಾಡುವುದಕ್ಕಾಗುವುದಿಲ್ಲವಾದ್ದರಿಂದ ಸಂಘಟನಾ ಸಮಸ್ಯೆಯನ್ನು ಚರ್ಚಿಸಲು ಮಾತ್ರ ಒಂದು ಅಖಿಲ ಭಾರತ ಪ್ಲೀನಮ್ ನಡೆಸಬೇಕೆಂದು ಜಲಂಧರ್ ಅಧಿವೇಶನ ತೀರ್ಮಾನಿಸಿತು.

ಇದರ ಪ್ರಕಾರ ನಡೆದ ಸಾಲ್ಕಿಯಾ ಸಮ್ಮೇಳನದಲ್ಲಿ ಕೇಂದ್ರಸಮಿತಿ ಮಂಡಿಸಿದ ದೀರ್ಘವಾದ ಚರ್ಚೆ ಹಾಗೂ ತಿದ್ದುಪಡಿಗಳ ನಂತರ ಅಂಗೀಕರಿಸಿದ ದಾಖಲೆ ಕಳೆದ ಎರಡೂವರೆ ವರ್ಷಗಳ ಕಾಲ ಪಕ್ಷದ ಸದಸ್ಯರ ಮುಂದೆ ಇದೆ. ಈ ದಾಖಲೆಯಲ್ಲಿ ಕೇಂದ್ರ ಸಮಿತಿ ಮಾಡಬೇಕಾದ ಕರ್ತವ್ಯ, ರಾಜ್ಯಸಮಿತಿ ಮಾಡಬೇಕಾದ ಕರ್ತವ್ಯ ಹಾಗೂ ಕೆಳಹಂತದ ಪ್ರತಿಯೊಂದು ಶಾಖೆಗಳೂ ಮಾಡಬೇಕಾದದ್ದು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ, ಕಾರ್ಯಗತಮಾಡದೆ ಇರುವ ಅಂಶ ಯಾವುದು, ಅದಕ್ಕೆ ಕಾರಣ ಏನು ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೋಧಿಸುವುದೇ ಹನ್ನೊಂದನೆಯ ಪಾರ್ಟಿ ಅಧಿವೇಶನದ ಮುಖ್ಯ ಕೆಲಸ.

ಇದಕ್ಕಾಗಿ ಕೆಲವು ರಾಜ್ಯಗಳಲ್ಲಿ ರಾಜ್ಯಮಟ್ಟದ ಪ್ಲೀನಮ್‌ಗಳು ನಡೆದಿದೆ. ಇತರ ಕಡೆಗಳಲ್ಲಿ ಕೇಂದ್ರಸಮಿತಿ ಹಾಗೂ ರಾಜ್ಯಸಮಿತಿ ಸೇರಿ ಚರ್ಚೆ ನಡೆಸಿದೆ. ಈ ಚರ್ಚೆಗಳ ಫಲವಾಗಿ ರಾಜಕೀಯ ಧೋರಣೆಯನ್ನು ಕಾರ್ಯಗತಗೊಳಿಸುವಸಂದರ್ಭದಲ್ಲೇ ಸಂಘಟನೆಯನ್ನು ಬೆಳೆಸುವುದರಲ್ಲಿ ಉಂಟಾದ ಸಾಧನೆ ಹಾಗೂ ಕೊರತೆಗಳನ್ನು ಮನನ ಮಾಡಿ ಇಂದಿಗಿಂತ ಎಷ್ಟೋ ದೊಡ್ಡದಾದ ಒಂದು ಪಕ್ಷ, ಇಂದಿಗಿಂತ ಎಷ್ಟೋ ಉನ್ನತವಾದ ರಾಜಕೀಯ ಪ್ರಜ್ಞೆಯಿಂದ ವರ್ತಿಸುವ ಪಕ್ಷದ ಸದಸ್ಯರುಗಳು, ತನ್ನ ಸರ್ವಸ್ವ

[6ನೇ ಪುಟ ನೋಡಿ]

ನವೆಂಬರ್ 3ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರ

ಸೆಪ್ಟೆಂಬರ್ 6 ರಂದು ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಚಳುವಳಿ ಸಮಿತಿಯ (NCC) ಆಶ್ರಯದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು, ಫೆಡರೇಷನ್‌ಗಳು, ಸ್ವತಂತ್ರ ಸಂಘಟನೆಗಳು ಜಂಟಿಯಾಗಿ ವ್ಯವಸ್ಥೆ ಮಾಡಲಾಗಿದ್ದ ಸಮಾವೇಶದಲ್ಲಿ ಈ ಸಾರ್ವತ್ರಿಕ ಮುಷ್ಕರದ ತೀರ್ಮಾನಕೈಗೊಳ್ಳಲಾಯಿತು. ನವೆಂಬರ್ 23 ರಂದು ನಡೆಯಲಿರುವ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದೂ ಈ ಸಮಾವೇಶ ಕರೆಕೊಟ್ಟಿತು.

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಎಚ್. ಎಂ. ಎಸ್., ಬಿ. ಎಂ. ಎಸ್., ಯು. ಟಿ. ಯು. ಸಿ. ಗಳಿಗೆ ಸೇರಿದ ಕಾರ್ಮಿಕ ಸಂಘಟನೆಗಳ ಮತ್ತು ಬ್ಯಾಂಕ್, ಎಲ್ಲೈಸಿ, ಕೆ.ಇ.ಬಿ. ಸರಕಾರಿ ನೌಕರರ ಮತ್ತು ಸಾರ್ವಜನಿಕ ವಲಯ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸಿ ಸುಮಾರು 1 200 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದವು.

ಬೆಲೆಗಳು ದಿನದಿಂದ ದಿನಕ್ಕೆ ಗಗನಕ್ಕೇರಿರುವ ಈ ಸಂದರ್ಭದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವ ಕಾರ್ಮಿಕ ಸಂಘಟನೆಗಳನ್ನು ಸದೆಬಡೆಯುವ ಕ್ರಮವನ್ನು ಸರಕಾರ ಅನುಸರಿಸುತ್ತಿದೆ. ವೇತನ ಸ್ತಂಭನಕ್ಕೆ ಹವಣಿಸುತ್ತಿದೆ. ಮುಷ್ಕರಗಳನ್ನು ಪ್ರತಿಬಂಧಿಸುತ್ತಿದೆ. ಇದು ಕಾರ್ಮಿಕ ವರ್ಗದ ಪಾಡಾದರೆ ತಮ್ಮ ಬೇಡಿಕೆಗಳಿಗಾಗಿ ಎಚ್ಚೆತ್ತು ಹೋರಾಡುತ್ತಿರುವ ರೈತಾಪಿ ವರ್ಗವನ್ನು ತುಳಿಯಲು ಸರಕಾರ ಯತ್ನಿಸಿದೆ.

ಸಿ.ಐ.ಟಿ.ಯು. ವಿನ ಕಾಂ. ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿ.ಯ ಕಾಂ. ಎಂ. ಎಸ್. ಕೃಷ್ಣನ್, ಬಿ.ಎಂ.ಎಸ್. ನ ಶ್ವೇತಾದ್ರಿ, ಎಚ್.ಎಂ.ಎಸ್. ನ ರಾಜಗೋಪಾಲ್ ಮೊದಲಾದವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿ ರಾಜ್ಯ ಸರಕಾರದ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಧೋರಣೆಗಳನ್ನು ಬಯಲಿಗೆಳೆದರು. ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ನಡೆಸುವ ಹೋರಾಟವನ್ನು ಹತ್ತಿಕ್ಕುವ ಪ್ರವೃತ್ತಿಯ ವಿರುದ್ಧ ಸಂಘಟಿತ ಹೋರಾಟ ನಡೆಸಲು ಕರೆಕೊಟ್ಟರು.

ಈ ಸಮಾವೇಶವು 17 ಅಂಶಗಳ ಬೇಡಿಕೆಗಳ ಪಟ್ಟಿಯನ್ನು ಸರಕಾರದ ಮುಂದಿಟ್ಟಿತು. ●

ಸೌದೆ ಅಭಾವ ಕುರಿತು ಪ್ರತಿಭಟನೆ

ಸೆಪ್ಟೆಂಬರ್ 13ರಂದು ಶಿವಮೊಗ್ಗೆಯಲ್ಲಿ ವಿವಿಧ ಪಕ್ಷಗಳ. ಸಂಘಸಂಸ್ಥೆಗಳ ಮುಖಂಡರ ಸಭೆ ನಡೆದು ನಗರದಲ್ಲಿ ಸೌದೆ ಅಭಾವದಿಂದಾಗಿ ಜನತೆ ಬವಣೆ ಪಡುತ್ತಿರುವ ಕುರಿತು ಚರ್ಚಿಸಲಾಯಿತು. ಶ್ರೀ ಸೋಲೋಮನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಚಂದೂಕುಟ್ಟಿ ಮತ್ತು ಎಸ್. ಬಿ. ಶಿವಶಂಕರ, ಲೋಕದಳದ ಶ್ರೀ ಎಸ್. ಎಸ್. ಕುಮುಟ, ಎಲ್ಲೈಸಿ ನೌಕರರ ಸಂಘದ ಕಾಂ. ಲಕ್ಷ್ಮೀನಾರಾಯಣ, ಅಂಚೆ-ತಂತಿ ನೌಕರರ ಸಂಘದ ಪರವಾಗಿ ಪಾಲ್‌ಡಿಸೋಜ, ವಿದ್ಯುಚ್ಛಕ್ತಿ ನೌಕರರ ಸಂಘದ ತಿಮ್ಮರಾಯಪ್ಪ ಭಾಗವಹಿಸಿದ್ದರು.

ಶಿವಮೊಗ್ಗ ನಗರದಲ್ಲಿರುವ ಸೌದೆ ಡಿಪೋಗಳಲ್ಲಿ ಸೌದೆಯನ್ನು ಸ್ಟಾಕು ಇಡುವ ವ್ಯವಸ್ಥೆ ಮಾಡಬೇಕು, ಸೌದೆ ಪ್ರಮಾಣ ತಿಂಗಳಿಗೆ ಒಂದು ಕುಟುಂಬಕ್ಕೆ ಕನಿಷ್ಟ ಕಾಲು ಟನ್ (250 ಕೆ.ಜಿ.) ವಿತರಣೆ ಆಗಬೇಕು ಎಂದು ಸರಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಸೆಪ್ಟೆಂಬರ್ ಕೊನೆಯೊಳಗೆ ಸರಿಪಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು, ಸರಕಾರವನ್ನು ಒತ್ತಾಯಿಸಿ, ಇಲ್ಲವಾದಲ್ಲಿ ಸೆಪ್ಟೆಂಬರ್ ತಿಂಗಳ ನಂತರ ಹೊರಗಡೆ ಕಳಿಸುವ ಸೌದೆ ಲಾರಿಗಳನ್ನು ತಡೆಗಟ್ಟುವದೂ ಸೇರಿ ಉಗ್ರಕ್ರಮ ಕೈಗೊಳ್ಳಬೇಕಾದೀತೆಂದು ಎಚ್ಚರಿಸಲಾಯಿತು.

ಆರಂಭದಲ್ಲಿ ಕಾಂ. ಚಂದೂಕುಟ್ಟಿಯವರು ಸಂಚಾಲಕರಾಗುಳ್ಳ ಪ್ರಗತಿಪರ ಜನತಂತ್ರ ರಂಗವನ್ನು ಪುನರ್‌ರಚಿಸಲಾಯಿತು. ○

ಧರಣೆ ಸತ್ಯಾಗ್ರಹ

9–9–81ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ಅಂಗರೇಖನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳ ಕೃಷಿಕಾರ್ಮಿಕರು 10 ಮೈಲಿ ದೂರವನ್ನು ಕಾಲ್ನಡಿಗೆಯಿಂದ ಬಂದು ಚಿಕ್ಕಬಳ್ಳಾಪುರದಲ್ಲಿ ಮೆರವಣಿಗೆ ನಡೆಸಿದರು. ನಂತರ ತಾಲ್ಲೂಕು ಆಫೀಸಿನೆದುರು ಧರಣೆ ಸತ್ಯಾಗ್ರಹ ನಡೆಸಲಾಯಿತು.

ಮೆರವಣಿಗೆ ಮತ್ತು ಧರಣೆ ಸತ್ಯಾಗ್ರಹದ ನೇತೃತ್ವವನ್ನು ರೈತಮುಖಂಡ ಕಾಂ. ಲಕ್ಷ್ಮಯ್ಯ, ಕೆ. ಎಂ. ಮುನಿಶಾಮಯ್ಯ, ಎಂ. ರಾಮಯ್ಯ, ಚೆನ್ನಕೃಷ್ಣಪ್ಪ, ತಿರುಮಲಪ್ಪ, ಚೆನ್ನರಾಯಪ್ಪ ಮತ್ತು ಪಾರ್ವತಮ್ಮ ಮೊದಲಾದವರು ವಹಿಸಿದ್ದರು.

ಭೂರಹಿತ ಮತ್ತು ಹರಿಜನ–ಗಿರಿಜನರಿಗೆ ಕಾಯ್ದಿರಿಸಿದ 200 ಎಕರೆ ಜಮೀನನ್ನು ಹಂಚಬೇಕೆಂದೂ, ಈ ಜಮೀನಿನಲ್ಲಿ (10ನೇ ಸ. ನಂ) ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿರುವ ಖದೀಮರನ್ನು ಉಚ್ಚಾಟಿಸಿ ಬಡರೈತರಿಗೆ ಹಂಚಬೇಕೆಂದೂ ಒತ್ತಾಯಿಸಿ ತಹಸೀಲ್ದಾರರಿಗೆ ಮನವಿಪತ್ರ ಸಲ್ಲಿಸಲಾಯಿತು. ತಹಸೀಲ್ದಾರರನ್ನು ಕಾಂ. ಜಿ. ದೊರೆಸ್ವಾಮಿ ಮತ್ತು ಕಾಂ. ಕೆ. ಎಂ. ವೆಂಕಟೇಶ್ ಇವರು ಭೇಟಿ ಮಾಡಿ ಮನವಿ ಸಲ್ಲಿಸಿದರು. ●

ಕಾಯಂ ಪರಿಹಾರಕ್ಕೆ ಯೋಜನಾ ಸಮಿತಿ ಅಸ್ತಿತ್ವಕ್ಕೆ

8–9-81ರಂದು ರಾಯಚೂರು, ಗುಲ್ಬರ್ಗಾ, ಬಿಜಾಪುರ ಮತ್ತು ಬೀದರ ಜಿಲ್ಲೆಯ ರೈತಮುಖಂಡರ ಸಭೆಯು ಗುಲ್ಬರ್ಗದಲ್ಲಿ ನಡೆಯಿತು. ಕಾಂ. ಎನ್. ಕೆ. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲೆಯ ಕಾರ್ಯದರ್ಶಿ ಕಾಂ. ಹಸನ್‌ಖಾನ್‌ರು ಸಭೆಗೆ ಆಗಮಿಸಿದವರನ್ನು ಸ್ವಾಗತಿಸಿದರು. ಆರಂಭದಲ್ಲಿ ಇತ್ತೀಚೆಗೆ ಅಗಲಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಎ. ಬಾಲಸುಬ್ರಮಣ್ಯಂ, ಸಿ. ಪಿ. ಐ. ಮುಖಂಡ ಕಾಂ. ಭೂಪೇಶ್ ಗುಪ್ತ ಮತ್ತು ಕಾಂ. ರಾಹೀಂ ದಖನಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಾಂ. ಚಂದ್ರಶೇಖರ ಬಾಳಿಯವರು ಸವದತ್ತಿಯಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಮಂಡಳಿಯಲ್ಲಿ ಬರಗಾಲ ಪರಿಹಾರ ಕಾರ್ಯಕ್ರಮವನ್ನು ರೂಪಿಸಲು, ಬರಗಾಲ ಪ್ರದೇಶಗಳಿಗಾಗಿ ಒಂದು ಸಮಿತಿಯನ್ನು ರಚಿಸುವ ಬಗ್ಗೆ ನಡೆದ ಚರ್ಚೆಯನ್ನು ವಿವರಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯಮಂಡಳಿ ಸಭೆಯಲ್ಲಿ ಅಖಿಲಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ ಅವರು ತಿಳಿಸಿದಂತೆ ಬರಗಾಲ ಪೀಡಿತ ಪ್ರದೇಶಗಳ ಒಂದು ಪ್ರತ್ಯೇಕ ಸಮಿತಿಯನ್ನು ರಚಿಸಿ, ಕೂಲಂಕುಷ ಸಮೀಕ್ಷೆ ನಡೆಸಿ, ಆ ಪ್ರದೇಶದ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳ ಜೊತೆಗೂಡಿ ಚಳುವಳಿ ರೂಪಿಸುವ, ಸರಕಾರಕ್ಕೆ ಒತ್ತಾಯಿಸುವ ಅವಶ್ಯಕತೆಯನ್ನು ಕಾಂ. ಬಾಳಿ ತಿಳಿಸಿದರು.

ಪ್ರತಿ ಜಿಲ್ಲೆಗೆ ಇಬ್ಬರಂತೆ 11 ಜನರ ಸಮಿತಿಯನ್ನು ರಚಿಸಿ ಕಾಂ. ಚಂದ್ರಶೇಖರ ಬಾಳಿಯವರನ್ನು ಸಂಚಾಲಕರನ್ನಾಗಿ ಚುನಾಯಿಸಲಾಯಿತು. ○

ಡಿ.ವೈ.ಎಫ್.ಐ. ಸಭೆ

7–9–81ರಂದು ಪುತ್ತೂರಿನಲ್ಲಿ ಯುವಜನ ಸಂಘಟನೆಯ ತಾಲ್ಲೂಕು ಸಮಿತಿಯ ಸಭೆ ಸೇರಿತ್ತು. ಸಭೆಯಲ್ಲಿ ಪ್ರಸಕ್ತ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳ ಬಗ್ಗೆ ಚರ್ಚಿಸಲಾಯಿತು. ಅಕ್ಟೋಬರ್‌ನಲ್ಲಿ ನಡೆಯಲಿರುವ ರಾಜ್ಯಸಮ್ಮೇಳನವನ್ನು ಯಶಸ್ವಿಗೊಳಿಸಲು ತಾಲ್ಲೂಕು ಸಂಚಾಲಕ ಕಾಂ. ವಿಲ್‌ಫ್ರೆಡ್ ಡಿಸೋಜರು ಕೇಳಿಕೊಂಡರು. ●

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾತ್ವಿಕ ನಿಲುವು

[5ನೇ ಪುಟದಿಂದ]

ವನ್ನೂ ಕ್ರಾಂತಿಕಾರಿ ಚಳುವಳಿಗೆ ಹಾಗೂ ಪಕ್ಷಕ್ಕಾಗಿ ಮುಡಿಪಾಗಿಡುವ ನಿಷ್ಠಾವಂತ ಕ್ರಿಯಾಶೀಲರು ಇವುಗಳನ್ನು ಸಾಧಿಸಬಹುದೆಂದು ನಿರೀಕ್ಷಿಸೋಣ.

ಈ ಎಲ್ಲಾ ಕಾರ್ಯದಲ್ಲೂ ಇಂದು ಕೆಲವು ದೌರ್ಬಲ್ಯಗಳು ಪಕ್ಷದ ಸಂಘಟನೆಯಲ್ಲಿ ಕೆಳಮಟ್ಟದಿಂದ ಮೇಲ್ಮಟ್ಟದವರೆಗೆ ಇರುವುದನ್ನು ಸಾಲ್ಕಿಯ ಪ್ಲೀನಮ್‌ನಲ್ಲಿ ಯಾವ ಮುಚ್ಚುಮರೆ ಇಲ್ಲದೆ ಹೇಳಲಾಗಿದೆ. ಪ್ರತಿಯೊಂದು ಘಟಕವ ಹಾಗೂ ಒಂದು ಘಟಕದ ಪ್ರತಿಯೊಬ್ಬ ಸದಸ್ಯರ ಚಟುವಟಿಕೆಯಲ್ಲಿ ಇವು ಎಷ್ಟರ ಮಟ್ಟಿಗೆ ಪರಿಣಾಮ ಬೀರಿವೆಯೆಂಬುದನ್ನು ಶೋಧಿಸಬೇಕು. ಪ್ರತಿಯೊಬ್ಬ ಕಾಮ್ರೇಡ್‌ಗೆ ಇರುವ ಗುಣಗಳನ್ನು ಉಪಯೋಗಿಸಬೇಕು. ಮತ್ತು ಅದನ್ನು ಪುಷ್ಟೀಕರಿಸುವ ಜೊತೆಗೆ ದೌರ್ಬಲ್ಯಗಳೇ ಇಲ್ಲದ ವ್ಯಕ್ತಿ ಯಾರೂ ಇಲ್ಲವೆಂಬ ಸಂಗತಿಯನ್ನು ಮನದಲ್ಲಿಟ್ಟು ಪ್ರತಿಯೊಬ್ಬ ಪಾರ್ಟಿ ಸದಸ್ಯರ ದೌರ್ಬಲ್ಯಗಳನ್ನು ಪರಿಹರಿಸಲು ಆತ ಸದಸ್ಯನಾಗಿರುವ ಘಟಕ ಆತನಿಗೆ ನೆರವಾಗಬೇಕು. ಇದನ್ನೇ ಟೀಕೆ ಮತ್ತು ಸ್ವಯಂಟೀಕೆ ಎಂಬ ಪದಪ್ರಯೋಗದಿಂದ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಅರ್ಥಮಾಡುವುದು.

ಇದು ಮಾರ್ಕ್ಸ್‌ವಾದ-ಲೆನಿನ್‌ವಾದದ ಸಂಘಟನಾ ತತ್ವಗಳಲ್ಲಿ ಬಹಳ ಮುಖ್ಯವಾದುದಾದರೂ ಇಪ್ಪತ್ತು ವರ್ಷಗಳಿಂದೀಚೆ ಕಮ್ಯುನಿಸ್ಟ್ ಪಾರ್ಟಿಯಲ್ಲಿ ಸ್ವಲ್ಪಸ್ವಲ್ಪವಾಗಿ ಈ ಟೀಕೆ-ಸ್ವಯಂಟೀಕೆ ಇಲ್ಲದಾಗುತ್ತಿದೆ. ಇದನ್ನು ಪುನಃ ಜಾರಿಯಲ್ಲಿ ತರದೆ ಕ್ರಾಂತಿಕಾರಿ ಕರ್ತವ್ಯವನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಈ ನಿಜಾಂಶವನ್ನು ಸಾಲ್ಕಿಯ ನಿರ್ಣಯದಲ್ಲಿ ವ್ಯಕ್ತಪಡಿಸಲಾಗಿದೆ.

ಟೀಕೆ-ಸ್ವಯಂ ಟೀಕೆಗಳನ್ನು ಪಾರ್ಟಿ ಸಂವಿಧಾನ ಸಾರುವ ಕರ್ತವ್ಯಗಳನ್ನು ಪಕ್ಷದ ಸದಸ್ಯರುಗಳು ಎಷ್ಟರ ಮಟ್ಟಿಗೆ ಪೂರೈಸಿದ್ದಾರೆ, ಸಂವಿಧಾನದ ಪ್ರಕಾರ ಪಾರ್ಟಿ ಸದಸ್ಯರಿಗೆ ಇರುವ ಹಕ್ಕನ್ನು ಕಸಿದುಕೊಳ್ಳುವ ರೀತಿಯಲ್ಲಿ ಪಕ್ಷದ ನೇತೃತ್ವ ವರ್ತಿಸುತ್ತಿದೆಯೇ ಮೇಲ್‌ಘಟಕ ಮತ್ತು ಕೆಳಘಟಕಗಳ ಮಧ್ಯೆ ಇರುವ ಸಂಬಂಧಗಳು ಪ್ರಜಾಪ್ರಭುತ್ವ, ಕೇಂದ್ರೀಕರಿಸಿದ ನೇತೃತ್ವ ಎಂಬೀ ಎರಡು ಅಂಶಗಳಿಗೂ ಸಮಾನವಾದ ಪ್ರಾಮುಖ್ಯ ಕೊಡುತ್ತಿದೆಯೇ-ಎಂಬುದನ್ನೂ ಪರಿಶೋಧಿಸಬೇಕಾಗಿದೆ.

ಈ ಎರಡು ಘಟಕಗಳಲ್ಲಿ ಯಾವುದಾದರೊಂದನ್ನು ಉಲ್ಲಂಘನೆ ಮಾಡುವುದರಿಂದ ಉಂಟಾಗುವುದೇ ನೌಕರಶಾಹಿ, ವೈಯುಕ್ತಿಕವಾದ, ಸ್ಥಳೀಯ ಸಂಕುಚಿತ ವಾದಗಳು. ಆದುದರಿಂದ ಉನ್ನತ ನಾಯಕರಿಂದ ಹಿಡಿದು ಕೆಳಗಿನ ಸಾಮಾನ್ಯ ಸದಸ್ಯರುಗಳವರೆಗೆ ಒಬ್ಬೊಬ್ಬರಲ್ಲಿರುವ ದೌರ್ಬಲ್ಯಗಳು, ದುರ್ಗುಣಗಳನ್ನು ಹೋಗಲಾಡಿಸಿ ಸಾಮರ್ಥ್ಯಗಳನ್ನು ಹೆಚ್ಚಿಸಿ ವ್ಯಕ್ತಿಗಳ ಸಾಮರ್ಥ್ಯ ಪಕ್ಷದ ಹಾಗೂ ಚಳುವಳಿಯ ಬೆಳವಣಿಗೆಗೆ ಉಪಯೋಗಿಸಬೇಕು.

ಇಲ್ಲಿ ಮುಖ್ಯವಾಗಿ ಇನ್ನೊಂದು ವಿಚಾರವನ್ನೂ ಹೇಳಬೇಕಾಗಿದೆ. ಅದೇನೆಂದರೆ ಪಕ್ಷದ ಸದಸ್ಯರ ಹಾಗೂ ಹಿತೈಷಿಗಳ ಸೈದ್ಧಾಂತಿಕ ಮಟ್ಟವನ್ನು ಹೆಚ್ಚಿಸಲು ಸಂಘಟಿತವಾದ ಶ್ರಮಗಳನ್ನು ವಿಶದವಾಗಿ ಸಾಲ್ಕಿಯಾ ಪ್ಲೀನಮ್ ನಿರ್ಣಯದಲ್ಲಿ ವಿವರಿಸಿದೆ.

ಪಕ್ಷದ ಶಾಖೆಯಿಂದ ತೊಡಗಿ ಮೇಲ್ಮಟ್ಟದ ಪ್ರತಿಯೊಂದು ಘಟಕವೂ ಈ ಸಂಘಟನಾ ನಿರ್ಣಯವನ್ನು ಕರ್ತವ್ಯ ನಿರತವಾಗಿ ಕಾರ್ಯಗತ ಮಾಡಬೇಕು. ಆಗ ಮಾತ್ರ ಚರಿತ್ರೆ ನಮ್ಮ ಕೈಗೆ ನೀಡಿರುವಂತಹ ಮಹತ್ತಾದ ಕರ್ತವ್ಯಗಳನ್ನು ಪೂರೈಸುವ ಸಾಮರ್ಥ್ಯವಿರುವ ಲಕ್ಷಗಟ್ಟಲೆ ಸದಸ್ಯರುಗಳ ಸಂಘಟಿತ ಚಟುವಟಿಕೆ ಪಕ್ಷಕ್ಕೆ ಲಭಿಸುವುದು ಸಾಧ್ಯ. ಪಕ್ಷದ ಸದಸ್ಯರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸುವುದು ಎಂಬ ವಾಕ್ಯದ ಅರ್ಥ ಇದೇ ಆಗಿದೆ.

ಸಂಘಟನಾತ್ಮಕ ಹಂತದಲ್ಲಿ ಸಾಲ್ಕಿಯಾ ಪ್ಲೀನಮ್‌ನ ನಿರ್ಣಯ ರಾಜಕೀಯ ಹಂತದಲ್ಲಿ ಜಲಂಧರ್ ನಿರ್ಣಯಗಳನ್ನು ನಾವು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಲು ತೊಡಗಿದ್ದಾದರೆ ಇಂದಿರುವ ಕಠಿಣ ಪರಿಸ್ಥಿತಿಗಳನ್ನೂ ದಾಟಿ, ಪಕ್ಷವನ್ನು ಹಾಗೂ ಕ್ರಾಂತಿಕಾರಿ ಚಳುವಳಿಯನ್ನು ಬೆಳೆಸಲು ಸಾಧ್ಯ. ●

ಕರ್ನಾಟಕ ರಾಜ್ಯದಲ್ಲಿ

[3ನೇ ಪುಟದಿಂದ]

ಮಾಡಿದ್ದಾರೆ. ಹೆಚ್ಚುವರಿ ಭೂಮಿಯನ್ನೂ ಅದೇ ರೀತಿ ಭೂಹೀನರಿಗೆ ಹಂಚಿದ್ದಾರೆ. ಆದ್ದರಿಂದ ಪ. ಬಂಗಾಲದಲ್ಲಿ ಲಂಚಕೊಟ್ಟು ಭೂಮಿ ಹಕ್ಕು ಪಡೆಯುವ ಅವಶ್ಯಕತೆಯಿಲ್ಲ, ರಿಟ್‌ಗಳ ಹಾವಳಿಯಿಲ್ಲ. ಹೆಬ್ಬೆಟ್ಟು ಗುರ್ತಿನ ಭೂನ್ಯಾಯ ಮಂಡಲಿ ಸದಸ್ಯರ ಕಿತಾಪತಿಯೂ ಇಲ್ಲ.

ಸಾವಿರಾರು ಭೂನ್ಯಾಯ ಮಂಡಲಿ ಸದಸ್ಯರು ನಿರುದ್ಯೋಗಿಗಳಾಗಬಾರದೆಂಬ ಮಹೋದ್ದೇಶದಿಂದ ಅವರ ಸಲುವಾಗಿ ಸರಕಾರ ಮತ್ತೊಂದು ಯೋಜನೆ ಯೋಜಿಸಿದೆ. ರಾಜ್ಯದಲ್ಲಿ ವ್ಯವಸಾಯಕ್ಕೆ ಲಭ್ಯವಿರುವ ಎಲ್ಲಾ ಭೂಮಿಯನ್ನು ಭೂರಹಿತರಿಗೆ ಹಂಚುವ ಸಲುವಾಗಿ ತಾಲ್ಲೂಕು ಮಟ್ಟದಲ್ಲಿ ಭೂಹಂಚಿಕೆ ಸಲಹಾ ಸಮಿತಿಗಳನ್ನು ನೇಮಿಸಲಾಗುವುದಂತೆ. ಇಂದಿರಾ ಕಾಂಗ್ರೆಸ್ "ಪ್ರಿಯಂಕರರ" ನಿರುದ್ಯೋಗ ಸಮಸ್ಯೆ, ಭೂಸಮಸ್ಯೆ ಬಗೆಹರಿಸಲು ಇದೊಳ್ಳೇ ಯೋಜನೆಯಲ್ಲವೇ? ಇಂಥ ಬಕಾಸುರರಿಂದ ಹೆಚ್ಚುವರಿ ಭೂಮಿ ನ್ಯಾಯಯುತವಾಗಿ ಹಂಚಲ್ಪಡುತ್ತದೆಂದು ನೀವೇನಾದರೂ ನಂಬಿದ್ದೀರಾ? ಇಲ್ಲವೆಂದು ತಿಳಿಯಲೇ? ಆದರೆ ಈ ಯೋಜನೆಯಿಂದ ಆಳುವ ಕಾಂಗ್ರೆಸ್ ಕೂಸುಗಳಿಗೆ ಅಮೂಲು ಹಾಲು ಕುಡಿಸಿದುತಾಗುತ್ತದಷ್ಟೆ. ಜನಜಾಗ್ರತರಾದರೆ ಈ ಕೂಸುಗಳು ಹಾಲುಕುಡಿಯುವುದನ್ನೂ ಬಂದುಮಾಡಬಹುದು. ಅಜೀರ್ಣರಾಗಿ ಹೊಟ್ಟೆಕೆಡಿಸಿಕೊಳ್ಳುವುದನ್ನೂ ತಡೆಯಬಹುದು.

ಮೂರು ಗಂಟೆಗೆ ಮೂರು ಲಕ್ಷ ಖರ್ಚು

ಕರ್ನಾಟಕದ ವಿಧಾನಸಭೆ ವಿಸರ್ಜನೆಯಾಗಿ ಹೊಸ ಚುನಾವಣೆ ನಡೆಯುತ್ತದೆಂಬ ದಟ್ಟ ವಾರ್ತೆ ರಾಜ್ಯವನ್ನಾವರಿಸುತ್ತಿರುವಂತೆಯೇ ಗುಂಡೂರಾಯರು ತಮ್ಮ ಆಡಳಿತೆಯ ಹೊಸ ವಿಧಾನಗಳನ್ನು ಮುಂದುವರಿಸುವುದರಲ್ಲೇ ತಲ್ಲೀನರಾಗಿದ್ದಾರೆ.

ಫೈಲುಗಳ ಕಡತ, ಮನೆಬಾಗಿಲಿಗೇ ನ್ಯಾಯ, ಸ್ಟೈಪೆಂಡರಿ ಪದವೀಧರರಿಗೆ ಕಾಯಂ ನೌಕರಿ, ಸರಕಾರಿ ನೌಕರದಾರರ ಸಂಬಳ ವಿಮರ್ಶೆಗಳ ಫಲಿತಾಂಶದ ದಾರಿಕಾಯುತ್ತಿದ್ದಂತೆಯೇ, ರಾಜ್ಯದ ನಾಲ್ಕು ವಿಭಾಗಗಳ ಅಭಿವೃದ್ಧಿ ಯೋಜನೆ, ಜನರ ಸಮಸ್ಯೆಗಳನ್ನರಿತು ತೀರ್ಮಾನ ಕೈಗೊಳ್ಳಲು ವಿಭಾಗೀಯ ಕೇಂದ್ರಗಳಲ್ಲಿ ಮಂತ್ರಿಮಂಡಲದ ಸಭೆಗಳನ್ನು ಕರೆಯುವ ನಿರ್ಧಾರ ಕೈಗೊಳ್ಳಲಾಗಿದೆ.

21-9-81ರಂದು ಬೆಳಗಾವಿಯಲ್ಲಿ ಮಂತ್ರಿಮಂಡಲದ ಸಭೆ ಸೇರಿತ್ತು ಮುಂಜಾನೆ 9ರಿಂದ ಮಧ್ಯಾಹ್ನ 12 ಗಂಟೆಯವರೆಗೆ. 3 ಗಂಟೆಯ ಮಂತ್ರಿಮಂಡಲದ ಸಭೆಯಲ್ಲಿ ನಿಷ್ಕರ್ಷೆಯಾದ ವಿಷಯ ತಿಳಿದಿಲ್ಲ. ಈ ಅಲ್ಪಾವಧಿಯಲ್ಲಿ ಗಂಭೀರ ಚರ್ಚೆಮಾಡಿ ಎಲ್ಲ ತಂತರ್ಟಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು, ನಿರ್ಣಯ ಕೈಗೊಳ್ಳಲು ಸಾಧ್ಯವೇ? ಆದರೆ ಈ ಮೂರು ಗಂಟೆಯ ಮಂತ್ರಿಮಂಡಲದ ಸಭೆಗೆ ಮೂರು ಲಕ್ಷ ರೂಪಾಯಿ ಖರ್ಚಾಗಿದೆಯಂತೆ. ಇದಲ್ಲದೇ ಮುಖ್ಯ ಕಾರ್ಯದರ್ಶಿ, ಎಡಿಶನಲ್ ಕಾರ್ಯದರ್ಶಿ, ಪ್ರತಿಯೊಂದು ಜಿಲ್ಲೆಯ ಅಧಿಕಾರಿಗಳ 3 ದಿವಸಗಳ ಪೂರ್ವಭಾವಿ ಸಭೆಗಳಿಗಾಗಿ, ಅವರ ಸಂಚಾರಕ್ಕಾಗಿ ಆದ ಖರ್ಚು ಬೇರೆಯೇ. ಇಷ್ಟು ಖರ್ಚುಮಾಡಿ 3 ಗಂಟೆಯ ಸಭೆಯ ಪುರುಷಾರ್ಥವೇನು? ಬಡ ಜನತೆಯ ಹಣದ ಪೋಲು ಮಾತ್ರ.

ಒಬ್ಬೊಬ್ಬ ಮಂತ್ರಿಗೆ ಒಂದೊಂದು ಜಿಲ್ಲೆಯ ಜವಾಬ್ದಾರಿ ಕೊಟ್ಟಿರುವಾಗ, ಅವರು ಸಲ್ಲಿಸುತ್ತಿರುವ ವರದಿಯ ಆಧಾರದಲ್ಲಿ ಜಿಲ್ಲಾಧಿಕಾರಿಗಳು ರವಾನಿಸುತ್ತಿರುವ ಪ್ರಕರಣ ಮೇಲೆ ಕ್ರಮ ಕೈಗೊಳ್ಳಬಹುದಲ್ಲ. ಅದರಿಂದ ಈ ರೀತಿಯ ಹಣ ಪೋಲಾಗುವುದಿಲ್ಲವಲ್ಲ.

ಕೇರಳದ ಮುಖ್ಯಮಂತ್ರಿ ಇ. ಕೆ. ನಾಯನಾರ್ ಅವರ ಜೊತೆಯಲ್ಲಿ ಗುಂಡೂರಾಯರು ಮೊನ್ನೆ ತಾನೇ ಚರ್ಚಿಸಿದ್ದರು. ಕೇರಳ ಸರಕಾರದ ಅನುಕರಣೆ ಮಾಡಿದರೆ ವಿಭಾಗಗಳಲ್ಲಿ ಮಂತ್ರಿಮಂಡಲ ಸಭೆ ಕರೆಯುವ ಅವಶ್ಯಕತೆ ಇಲ್ಲೆಂದು ಇವರಿಗೆಗೊತ್ತು. ಆದರೆ ತನ್ನ ಮೂಲಕಿಣಿ ಇಂದಿರಮ್ಮ ಹಾಕಿಕೊಟ್ಟ ದಾರಿಯಲ್ಲೇ ಮುಂದುವರಿಯುತ್ತೇನೆಂಬ ಚಟ ಗುಂಡೂರಾಯರಿಗೆ. ಇಂಥ ಸಲ್ಲದ ಚಟಗಳನ್ನು ಚಿವುಟಿಹಾಕಲು ಜನ ಮುಂದಾಗಬೇಕಾದ್ದು ಅತ್ಯವಶ್ಯ.

●

ವಾರ್ಷಿಕ ಮಹಾಸಭೆ

ದ.ಕ. ಜಿಲ್ಲೆಯ ಕುಂದಾಪುರ ತಾಲೂಕಿನ ವಡೇರ ಹೋಬಳಿ 9 ನೇ ವಾರ್ಡಿನ DYFI ಪ್ರಥಮ ವಾರ್ಷಿಕ ಮಹಾಸಭೆಯು(6-9-81) ಮಹಾಬಲ ವಡೇರ ಹೋಬಳಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ವಿ. ನಾರಾಯಣರವರ ಸ್ವಾಗತದೊಂದಿಗೆ ಆರಂಭಗೊಂಡ ಈ ಸಭೆಯಲ್ಲಿ ಪ್ರಥಮ ವಾರ್ಷಿಕ ವರದಿಯನ್ನು ಲಕ್ಷ್ಮಣ್ ಓದಿದರು. ವರದಿ ಮೇಲೆ ಕೆಲವು ಚರ್ಚೆ ನಡೆಯಿತು.

ಧ್ವಜಾರೋಹಣವನ್ನು ಫಿಲಿಪ್ ಡಿಸೋಜ (DYFI ಅಧ್ಯಕ್ಷ ಕೋಣಿ) ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಆನಂದ ಭಂಡಾರಿಯವರು ಸಂಘಟನೆಯನ್ನು ಬಲಪಡಿಸುವ ಬಗ್ಗೆ ಒತ್ತಿ ಹೇಳಿದರು. ಶ್ರೀ ಶಿವಾನಂದ ಕೋಡಿ (ಅಧ್ಯಕ್ಷ ದ.ಕ. ಜಿಲ್ಲೆ DYFI), ವೆಂಕಟೇಶ ಕೋಣಿ ಮಾತನಾಡಿದರು.

1981-82 ರ 13 ಮಂದಿ ಸದಸ್ಯರನ್ನು ಆರಿಸಲಾಯಿತು. ಅಧ್ಯಕ್ಷರಾಗಿ ವಿ. ಗೋವಿಂದರವರು, ಕಾರ್ಯದರ್ಶಿಯಾಗಿ ವಿ. ನಾರಾಯಣ ಆಯ್ಕೆಯಾದರು.

ವಿ. ಮಾಧವನಾಯಕ್‌ರವರು ಲಘು ಉಪಹಾರವನ್ನು ಏರ್ಪಡಿಸಿದ್ದರು. ವಿ. ಶಂಕರ್ ವಂದಿಸಿದರು.

●

ರೈತಸಂಘದ ಬೆಂಬಲ

ಕರ್ನಾಟಕ ಪ್ರಾಂತ ರೈತಸಂಘದ ಮುಖಂಡ ಕಾಂ. ವಿ. ಎನ್. ಹಳಕಟ್ಟಿಯವರು ಈ ಕೆಳಕಂಡ ಪತ್ರಿಕಾ ಹೇಳಿಕೆ ನೀಡಿದ್ದಾರೆ.

"ದಲಿತ ಸಂಘರ್ಷ ಸಮಿತಿ ಮತ್ತು ರಾಯಚೂರು ಜಿಲ್ಲಾ ಪ್ರಾಂತ ರೈತ ಸಂಘವು ಸಂಯುಕ್ತ ಕ್ಷೇತ್ರದಲ್ಲಿ ಗಂಗಾವತಿ ದಲಿತರು ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಸರಕಾರಿ ಭೂಮಿಯನ್ನು ಅವರ ಮಾಲ್ಕಿಗೆ ಕೊಡಬೇಕೆಂದು ದಿನಾಂಕ 5-11-1981ರಿಂದ ತಹಶೀಲ್ದಾರ್ ಕಚೇರಿ ಎದುರು ಸರದಿ ಅನ್ನ ಸತ್ಯಾಗ್ರಹ ನಡೆಸಿದ್ದರೂ ಇನ್ನೂವರೆಗೂ ಅವರಿಗೆ ಸೂಕ್ತ ಪರಿಹಾರ ನೀಡದಿರುವುದನ್ನು ಕರ್ನಾಟಕ ಪ್ರಾಂತ ರೈತಸಂಘ ತೀವ್ರವಾಗಿ ಪರಿಗಣಿಸುತ್ತದೆ.

ಸರಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ಬಡ ದಲಿತ ಕೃಷಿಕೂಲಿಕಾರರಿಗೆ ಆ ಭೂಮಿಯ ಮಾಲ್ಕಿಯನ್ನು ಅವರಿಗೆ ನೀಡಲಾಗುವುದೆಂದು ಹಾಕಿಕೊಂಡಿರುವ ಸರಕಾರ ದಲಿತ ಕೃಷಿಕೂಲಿಕಾರರಿಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ಹಲವಾರು ವರ್ಷಗಳಿಂದ ಹದಗೊಳಿಸಿ ಸಾಗುವಳಿ ಮಾಡಿದ ಭೂಮಿಯನ್ನು ಅವರ ಮಾಲ್ಕಿಗೆ ಕೊಡುವಲ್ಲಿ ವಿಳಂಬ ಮಾಡಿರುವುದಲ್ಲದೆ ಅವರ ಒಕ್ಕಲು ಎಬ್ಬಿಸುವ ಬೆದರಿಕೆ ಹಾಕಿದೆ.

ಬಡವರ ಬಗ್ಗೆ, ಕೃಷಿಕೂಲಿಕಾರರ ಬಗ್ಗೆ ಸರಕಾರ ತೋರಿಸುವ ಕನಿಕರ ಹುರುಳಿಲ್ಲದ್ದೆಂದು ಗಂಗಾವತಿಯಲ್ಲಿ ನಡೆದ ಘಟನೆಯೇ ಸಾಕ್ಷಿ. ಅಧಿಕಾರಿಗಳು ಎಂ.ಎಲ್.ಎ.ಗಳು ಅಧಿಕಾರದ ದುರುಪಯೋಗ ಮಾಡಿ ಬೇಜವಾಬ್ದಾರಿಯಿಂದ ದಲಿತ ಕೃಷಿಕೂಲಿಕಾರರಿಗೆ ಮೋಸವೆಸಗಿರುತ್ತಾರೆ.

ಇದರ ವಿರುದ್ಧ ದಲಿತರು ಕೃಷಿಕೂಲಿಕಾರರು ಹೋರಾಟಕ್ಕಿಳಿದಿದ್ದಾರೆ. ಈ ನ್ಯಾಯಯುತ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತಸಂಘ ಸಂಪೂರ್ಣ ಬೆಂಬಲ ನೀಡುವುದು. ಒಂದು ವೇಳೆ ಸಂಬಂಧಿಸಿದ ಅಧಿಕಾರಿಗಳು, ಸರಕಾರ ಕೂಡಲೇ ಇದರ ಬಗ್ಗೆ ಸೂಕ್ತ ಪರಿಹಾರ ನೀಡುವಲ್ಲಿ ವಿಳಂಬ ಮಾಡಿದರೆ ಸರಕಾರಿ ಭೂಮಿಗಾಗಿ ದಲಿತ ಕೃಷಿಕಾರ್ಮಿಕರ ಹೋರಾಟ ಇನ್ನೂ ತೀವ್ರಗೊಳ್ಳುವುದೆಂದು ಈ ಮೂಲಕ ಎಚ್ಚರಿಕೆ ನೀಡುತ್ತದೆ".

●

ಕಾರ್ಯಕರ್ತರ ಸಭೆ

5-9-81ರಂದು ಪುತ್ತೂರು ತಾಲ್ಲೂಕಿನ ಕಡಬದಲ್ಲಿ ರೈತಸಂಘದ ಕಾರ್ಯಕರ್ತರ ಸಭೆ ನಡೆಯಿತು. ತಾಲ್ಲೂಕಿನ ಸುತ್ತಮುತ್ತಲ ಹಳ್ಳಿಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ತಾಲ್ಲೂಕು ರೈತಸಂಘದ ಸಹಕಾರ್ಯದರ್ಶಿ ಕಾಂ. ವಿಲ್ಫ್ರೆಡ್ ಡಿಸೋಜ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಬಿ. ರಾಮಕೃಷ್ಣ ಭಾಗವಹಿಸಿದ್ದರು.

ರೈತಸಂಘದ ತಾಲ್ಲೂಕು ಉಪಾಧ್ಯಕ್ಷ ಬಾಬೂಗೌಡ, ನೆಟ್ಟಣದ ಕಾಂ. ಕುಶಾಲಪ್ಪಗೌಡ ಮತ್ತು ಎ. ಸಿ. ತೋಡಿಯಾನ್ ಇವರುಗಳು ಸ್ಥಳೀಯ ಸಮಸ್ಯೆಗಳನ್ನು ಕುರಿತು ಮಾತನಾಡಿದರು.

ಮತ್ತೆ ಕಾಂಗ್ರೆ ಹಿಂಸಾಚಾರ

ವಿದ್ಯಾರ್ಥಿ ನಾಯಕನ ಮೇಲೆ ಹಲ್ಲೆ

ಕಳೆದ ಸೋಮವಾರ ರಾತ್ರಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ರಿಯಾಸಮಿತಿಯ ಸಂಚಾಲಕ ಎಂ. ಅಂಜನಪ್ಪನವರ ಮೇಲೆ ಕಾಂಗ್ರೆ ಗೂಂಡಾಗಳು ಅಮಾನುಷ ಹಲ್ಲೆ ನಡೆಸಿದ್ದಾರೆ.

ರಾವ್ ಸರಕಾರದ ಕೃಪಾಛತ್ರದಲ್ಲಿ ಸಮಾಜಘಾತುಕಶಕ್ತಿಗಳು ತಾವೇ ತಾವಾಗಿ ಮೆರೆಯುತ್ತಿದ್ದಾರೆ. ರಾವ್ ಸರಕಾರ ಆಡಳಿತಕ್ಕೆ ಬಂದ ಮೇಲೆ ನಡೆದ ಅನೇಕ ಹೇಯ ಕೃತ್ಯಗಳ ಸರಣಿಯಲ್ಲಿ ಶ್ರೀ ಅಂಜನಪ್ಪ ಅವರ ಮೇಲೆ ನಡೆದ ದಾಳಿಯೊಂದಾಗಿದೆ.

ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೀವ್ರ ಗಾಯಗಳಿಂದಾಗಿ ದಾಖಲಾಗಿರುವ ಶ್ರೀ ಅಂಜನಪ್ಪನವರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ 144 ಹೊಲಿಗೆಗಳನ್ನು ಹಾಕಲಾಗಿದೆ.

ರಾಜ್ಯದ ವಿವಿಧ ವಿರೋಧಿ ಪಕ್ಷಗಳು, ವಿದ್ಯಾರ್ಥಿ ಸಂಘಟನೆಗಳು ಈ ಅಮಾನುಷ ದಾಳಿಯನ್ನು ಉಗ್ರವಾಗಿ ಖಂಡಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮತ್ತು ಎಸ್. ಎಫ್. ಐ. ಕಾಂ. ಆರಾಧ್ಯ ಹೇಳಿಕೆಯೊಂದನ್ನು ಹೊರಡಿಸಿ ಹಲ್ಲೆಯನ್ನು ಉಗ್ರವಾಗಿ ಖಂಡಿಸಿರುವುದಲ್ಲದೇ ಹಲ್ಲೆಕಾರರ ಬಂಧನಕ್ಕೆ ಒತ್ತಾಯಿಸಿದ್ದಾರೆ.

●

ಸೆಪ್ಟೆಂಬರ್ 10ರಂದು ಬೆಂಗಳೂರಿನಲ್ಲಿ ರ್‍ಯಾಲಿ

ಸೆಪ್ಟೆಂಬರ್ 15ರಂದು ದೆಹಲಿಯಲ್ಲಿ ನಡೆದ ವಿದ್ಯಾರ್ಥಿ-ಯುವಜನರ ಬೃಹತ್ ರ್‍ಯಾಲಿಗೆ ಪೂರಕವಾಗಿ ಎಸ್.ಎಫ್.ಐ.ಮತ್ತು ಡಿ.ವೈ.ಎಫ್.ಐ. ರಾಜ್ಯಘಟಕಗಳು ಬೆಂಗಳೂರಿನಲ್ಲಿ ವಿದ್ಯಾರ್ಥಿ-ಯುವಜನರ ರ್‍ಯಾಲಿಯನ್ನು ಏರ್ಪಡಿಸಿದ್ದವು.

ಸೆಪ್ಟೆಂಬರ್ 10, 1981 ರಾಜ್ಯದ ವಿದ್ಯಾರ್ಥಿ-ಯುವಜನರ ಹೋರಾಟದಲ್ಲೊಂದು ಮಹತ್ವದ ದಿನ. ಕೇಂದ್ರ ವಿದ್ಯಾರ್ಥಿ-ಯುವಜನ ಕ್ರಿಯಾಸಮಿತಿ ಕರೆಯ ಮೇರೆಗೆ ಸುಮಾರು 500 ವಿದ್ಯಾರ್ಥಿ-ಯುವಜನರು ರಾಜಭವನಕ್ಕೆ ಮೆರವಣಿಗೆಯಲ್ಲಿ ಹೋಗಿ 13 ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನರ್ಪಿಸಿದರು. 'ಸರ್ವರಿಗೂ ಉದ್ಯೋಗ; ಸರ್ವರಿಗೂ ಶಿಕ್ಷಣ'ದ ಘೋಷಣೆಗಳನ್ನು ಬೆಂಬಲಿಸಿ ಐವತ್ತು ಸಾವಿರ ವಿದ್ಯಾರ್ಥಿಗಳ ಸಹಿಯೊಂದಿಗೆ ರಾಜ್ಯದ ವಿವಿಧ ಭಾಗದಿಂದ ಬಂದ ವಿದ್ಯಾರ್ಥಿ-ಯುವಜನ ಪ್ರತಿನಿಧಿಗಳು ರಾಜ್ಯದ ವಿದ್ಯಾರ್ಥಿ-ಯುವಜನತೆಯ ಐಕ್ಯದ ಹೊಸ ಹಾದಿಯೊಂದನ್ನು ತೋರಿಸಿದ್ದಾರೆ.

ಬೆಂಗಳೂರಿನ ಮುಖ್ಯಬೀದಿಗಳನ್ನು ಸುತ್ತಿಬಂದ ಮೆರವಣಿಗೆಯಲ್ಲಿ ಅನೇಕ ಮಹಿಳಾ ಸಂಗಾತಿಗಳೂ ಭಾಗವಹಿಸಿದ್ದು ಒಂದು ಹೊಸ ಬೆಳವಣಿಗೆ. ಸಾಯಂಕಾಲ 6 ಘಂಟೆಗೆ ಮೆರವಣಿಗೆ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಸಾರ್ವಜನಿಕರು, ವಿದ್ಯಾರ್ಥಿ-ಯುವಜನರು ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಬಹಿರಂಗ ಸಭೆಯನ್ನುದ್ದೇಶಿಸಿ ಡಿ. ವೈ. ಎಫ್. ಐ. ನ ರಾಜ್ಯಸಂಚಾಲಕರಾದ ಕಾಂ. ಶ್ರೀರಾಮರೆಡ್ಡಿ, ಎಸ್.ಎಫ್.ಐ.ನ ರಾಜ್ಯ ಪ್ರಧಾನಕಾರ್ಯದರ್ಶಿ ಆರಾಧ್ಯ, ಉಪಾಧ್ಯಕ್ಷ ಕಾಂ. ರುದ್ರಪ್ಪ ಕಾಯಿ, ಕಾರ್ಯದರ್ಶಿ ಕಾಂ. ಕೆ. ಬಸವರಾಜ, ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. ಸಂಚಾಲಕ ಕಾಂ. ಶಿವರಾಮುರವರು ಮಾತನಾಡಿ ನಿರುದ್ಯೋಗ ಸೃಷ್ಟಿಸಿದ ಸರಕಾರದ ನೀತಿಯನ್ನು ಕಟುವಾಗಿ ಟೀಕಿಸಿ ಹೋರಾಟ ಮುಂದುವರೆಸಲು ಕರೆ ನೀಡಿದರು.

ರಾಜ್ಯ ಎಸ್. ಎಫ್. ಐ. ಉಪಾಧ್ಯಕ್ಷ ಕಾಂ. ಎನ್. ರಾಜಣ್ಣ ಸ್ವಾಗತಿಸಿದರು, ಕಾಂ. ಶಾಂತಕುಮಾರಿ ವಂದನಾರ್ಪಣೆ ಸಲ್ಲಿಸಿದರು.

ರಾಜ್ಯ ಎಸ್.ಎಫ್.ಐ.ನ ಅಧ್ಯಕ್ಷರಾದ ಕಾಂ. ಜಯಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

○

ಕೋಮು ಗಲಭೆಗೆ ಆರ್. ಎಸ್. ಎಸ್. ಕಾರಣ

(1ನೇ ಪುಟದಿಂದ)

ಆರ್. ಎಸ್. ಎಸ್. ಜನಸಂಘವನ್ನು ತನ್ನ ರಾಜಕೀಯ ಅಂಗವನ್ನಾಗಿ ರೂಪಿಸಿಕೊಂಡು ಕಳೆದ ಎರಡೂವರೆ ದಶಕಗಳಿಂದಲೂ ಕೋಮು ಗಲಭೆಯನ್ನು ಹುಟ್ಟುಹಾಕುತ್ತಲೇ ಇದೆ. ಅಲ್ಪಸಂಖ್ಯಾತರ ವಿರುದ್ಧ, ಬಹುಸಂಖ್ಯಾತ ಹಿಂದೂ ಜನತೆಯನ್ನು ಪ್ರಚೋದಿಸುತ್ತಿರುವುದಲ್ಲದೇ ಕೋಮುಭಾವನೆ, ರಾಷ್ಟ್ರೀಯ ಸಂಕುಚಿತತೆ ಮುಂತಾದ ಅಪಾಯಕಾರೀ ಬೀಜಗಳನ್ನು ನೆಡುತ್ತಿದೆ. ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ನಡೆದ ಜೆಂಷೆಡ್ಪುರದ ಅಮಾನುಷ ಗಲಭೆಗಷ್ಟೇ ಅಲ್ಲ ತಾನು ಹುಟ್ಟಿದಾರಭ್ಯ ಇದೇ ಕೆಲಸಮಾಡುತ್ತಿದೆ. ಭಾರತದ "ಹಿಂದೂ ರಾಷ್ಟ್ರ" "ಅಖಂಡ ಭಾರತ" ಮುಂತಾದ ಗಂಡಾಂತರಕಾರಿ ಘೋಷಣೆಗಳನ್ನು ಆರ್. ಎಸ್. ಎಸ್. ಹುಟ್ಟುಹಾಕಿದೆ. ನಮ್ಮ ಸ್ವಾತಂತ್ರ್ಯ ಹರಣಕ್ಕೆ ಕಾಯ್ದುಕೊಂಡಿರುವ ದುಷ್ಟ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಅಪ್ರತ್ಯಕ್ಷವಾಗಿ ಆರ್. ಎಸ್. ಎಸ್. ಸಹಕಾರಿಯಾಗುತ್ತಿದೆ.

ಸಾಮ್ರಾಜ್ಯಶಾಹಿ ಅಮೇರಿಕವು ಪಾಕೀಸ್ಥಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದರ ಗಂಡಾಂತರ ಕುರಿತು ಕಣ್ಮುಚ್ಚಿರುವ ಆರ್. ಎಸ್. ಎಸ್. ಮತ್ತು ಬಿಜೆಪಿಯ ಮುಖಂಡರು ಭಾರತ ಸೋವಿಯತ್ ಯೂನಿಯನ್ ನಡುವಿರುವ ಸ್ನೇಹ ಸಂಬಂಧಗಳ ಕುರಿತು ಶಂಕೆ ತಾಳಿದ್ದಾರೆ. ಅಫ್‌ಘಾನಿಸ್ತಾನದಲ್ಲಿ ಸೋವಿಯೆತ್ ಪಡೆ ಆಗಮನ ಕುರಿತು ಆಕ್ರೋಷ ವ್ಯಕ್ತಪಡಿಸಿರುವ ಈ ನಾಯಕರು, ಕಾಶ್ಮೀರ ಕುರಿತು ಅಮೇರಿಕದ ಭಾರತ ವಿರೋಧಿ ಧೋರಣೆ, 1954ರ ಅಮೇರಿಕಾ-ಪಾಕ್ ಒಪ್ಪಂದ, ಪಾಕ್‌ನೊಂದಿಗೆ ನಡೆದ ಎರಡು ಯುದ್ಧಗಳಿಗೆ ಕಾರಣವಾದ ಅಮೇರಿಕೆಯ ಪ್ರಚೋದನೆ ಈ ಕುರಿತು ಮೌನವಹಿಸಿದೆ. ನಮ್ಮ ಎಲ್ಲ ಗಂಡಾಂತರದ ಸಮಯದಲ್ಲೂ ನಮ್ಮ ದೇಶಕ್ಕೆ ಎಲ್ಲ ಬಗೆಯ ಸಹಾಯಕೊಟ್ಟು ನಮ್ಮೊಂದಿಗೆ ದೃಢವಾಗಿ ನಿಂತ ಸೋವಿಯೆತ್ ಯೂನಿಯನ್ ಕುರಿತು ದ್ವೇಷಕಾರುತ್ತಿದ್ದಾರೆ. ಸಮಾಜವಾದಿ ಬಣದ ಕುರಿತು ಕುರುಡು ದ್ವೇಷ ಮಾಡುತ್ತಿದ್ದಾರೆ.

ಆರ್.ಎಸ್.ಎಸ್.ನ ಪ್ರಮುಖರು ತಮ್ಮದು ಸಾಂಸ್ಕೃತಿಕ ಸಂಘಟನೆ ಮಾತ್ರ ಎಂದು ಬೊಬ್ಬೆಹಾಕುತ್ತಾರೆ. ಬಿಜೆಪಿಯ ಧುರೀಣರು ಆರ್. ಎಸ್. ಎಸ್. ನೊಟ್ಟಿಗೆ ತಮ್ಮ ಸಂಘಟನಾ ಮತ್ತು ತಾತ್ವಿಕ ಸಂಬಂಧ ಮುರಿಯಲಸಾಧ್ಯ ಎಂದು ಬಹಿರಂಗವಾಗಿ ಘೋಷಿಸಿದ್ದಾರೆ. ಮುಸ್ಲಿಂ ಅಲ್ಪಸಂಖ್ಯಾತರನ್ನು ದ್ವೇಷಿಸುವ, ಕಮ್ಯುನಿಸಂ ಮತ್ತು ಸಮಾಜವಾದಿ ಬಣದೊಟ್ಟಿಗೆ ಪೂರ್ವಾಗ್ರಹ ಪೀಡಿತ ದೃಷ್ಟಿಕೋನವಿಟ್ಟುಕೊಂಡು ಭಾರತ-ಸೋವಿಯೆಟ್ ಯೂನಿಯನ್ ನಡುವೆ ಇರುವ ಮಧುರ ಸಂಬಂಧ ಕುರಿತು ಈ ಮುಖಂಡರು ಗುಲ್ಲೆಬ್ಬಿಸುತ್ತಿದ್ದಾರೆ. ಮತ್ತೆ ಸಾಂಸ್ಕೃತಿಕ ಸಂಘಟನೆಯ ಮುಖವಾಡ ಬೇರೆ.

ಆದ್ದರಿಂದ ದೇಶಪ್ರೇಮಿ, ಜಾತ್ಯಾತೀತ ದೃಷ್ಟಿಯಿಂದ ದೇಶದ ಭವಿಷ್ಯತ್‌ನ್ನು ಆಲೋಚನೆ ಮಾಡುವ ಎಲ್ಲಾ ಪಕ್ಷಗಳು, ಗುಂಪುಗಳು ಮತ್ತು ವ್ಯಕ್ತಿಗಳು, ಇಸ್ಲಾಂ ಮೂಲಭೂತವಾದಿ (Islam Fundamentalists)ಗಳು ಅಲ್ಪಸಂಖ್ಯಾತ ಮತೀಯ ಭಾವನೆಯನ್ನು ಹುಟ್ಟುಹಾಕುತ್ತಿರುವ ರೀತಿಯಲ್ಲೇ ಆರ್. ಎಸ್. ಎಸ್. ನವರೂ ಸಹ ಮತೀಯ ಮತ್ತು ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ಹರಡುತ್ತಿರುವುದರ ವಿರುದ್ಧ ತೀವ್ರವಾಗಿ ಪ್ರತಿಭಟಿಸಬೇಕಾದ ಅವಶ್ಯಕತೆ ಇದೆ.

ಭಾರತೀಯ ಜನತಾಪಕ್ಷವು ನಮ್ಮ ದೇಶದ ರಾಜಕೀಯಕ್ಕೆ ಒಂದು ಪರ್ಯಾಯ ಶಕ್ತಿಯಾಗಿ ಬೆಳೆಯಲು ಸಾಧ್ಯತೆ ಇದೆಯೆಂಬ ಭ್ರಮೆಯನ್ನು ಉಂಟುಮಾಡುತ್ತಿರುವ ದೊಡ್ಡ ಬಂಡವಾಳಶಾಹಿಗಳ ಹಿಡಿತದಲ್ಲಿರುವ ಪತ್ರಿಕೆಗಳು ಆರ್. ಎಸ್. ಎಸ್. ಮತ್ತು ಬಿ. ಜೆ. ಪಿ.ಯ ರಾಜಕೀಯ ಸಂಬಂಧವು ಬೇರೆ ಆಗಿಲ್ಲವೆಂಬುದನ್ನು, ಸಂಕುಚಿತ ರಾಷ್ಟ್ರೀಯತೆ ಮತ್ತು ಹಿಂದೂ ಮತೀಯವಾದದಿಂದ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಬರುತ್ತಿರುವ ರೀತಿಯಲ್ಲಿ ಅವು ವರ್ತಿಸುತ್ತಿವೆ ಎಂಬುದನ್ನು ಈ ಪತ್ರಿಕೆಗಳು ಮನಗಾಣಬೇಕಾಗಿದೆ. ಜೆಂಷೆಡ್‌ಪುರ ಗಲಭೆಯ ಕುರಿತು ಆರ್.ಎಸ್.ಎಸ್. ಮೇಲಿರುವ ಆರೋಪ ಇತ್ತೀಚಿನದು. ಈ ಹಿಂದೆ ನಡೆದಿರುವ ಮೊರಾದಾಬಾದ್, ಅಲೀಘಡ್, ಭಿವಂಡಿ, ಹೈದರಾಬಾದ್ ಮತ್ತು ತಲ್ಲಿಚೇರಿ ಮುಂತಾದ ಕಡೆಗಳಲ್ಲಿ ನಡೆದ ಭೀಕರ ಗಲಭೆಗಳ ಹಿಂದೆ ಆರ್.ಎಸ್.ಎಸ್.ನ ಕೈವಾಡವಿರುವುದು ನಿಸ್ಸಂಶಯ. ಆರ್. ಎಸ್. ಎಸ್. ಮತ್ತು ಬಿಜೆಪಿಯ ನಾಯಕರು ನಿರಾಕರಿಸಿದರೂ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ●

"ದೇಶದ ಪ್ರಗತಿಗೆ ಮಾರಕ"

(ಒಂದನೇ ಪುಟದಿಂದ)

ಲ್ಲಿಟ್ಟು, ಈ ರಾಷ್ಟ್ರಗಳ ಸಂಪತ್ತನ್ನು ಲೂಟಿಮಾಡಿ, ರಾಜಕೀಯವಾಗಿ ಬ್ಲಾಕ್‌ಮೈಲ್‌ಮಾಡಲು ಪ್ರಯತ್ನಿಸುತ್ತಿದೆ. ಈಗಾಗಲೇ ಅತ್ಯಂತ ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ನಮ್ಮ ದೇಶದ ಅರ್ಥವ್ಯವಸ್ಥೆಯು ಈ ಸಾಲಗಳ ಹೊರೆ ಮತ್ತು ಸಾಮ್ರಾಜ್ಯಶಾಹಿಯ ಕುತಂತ್ರಗಳಿಗೆ ಬಲಿಯಾಗುವುದು ಖಂಡಿತ. ಆರ್ಥಿಕ ಬಿಕ್ಕಟ್ಟು ಮತ್ತೂ ಆಳವಾಗಿ ಜನತೆಯ ಸಂಕಷ್ಟಗಳು ಇನ್ನೂ ಹೆಚ್ಚುವಾಗ ಜನತೆಯ ಪ್ರತಿಭಟನೆಯೂ ಬೆಳೆಯುವುದು ಸ್ವಾಭಾವಿಕ. ಬಿಕ್ಕಟ್ಟಿನ ಭಾರವನ್ನು ಜನತೆಯ ಮೇಲೆ ಹೇರುವುದಕ್ಕೆ, ಸಾಮ್ರಾಜ್ಯಶಾಹಿಯ ಶರತ್ತನ್ನು ಪಾಲಿಸುವುದಕ್ಕೆ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನೂ ಕಾಂಗ್ರೈ ಸರಕಾರವು ದಮನ ಮಾಡುವುದು ನಿಶ್ಚಯ. ಆದುದರಿಂದಲೇ ಕೇಂದ್ರಸರಕಾರದ ದಿವಾಳಿಕೋರ ಆರ್ಥಿಕ ನೀತಿ ಮತ್ತು ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗುವತ್ತ ದೇಶವನ್ನು ಮುನ್ನಡೆಸುವ ನೀತಿಗಳನ್ನು ಎಲ್ಲಾ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ವಿರೋಧಿಸಲೇಬೇಕು.

○

ಮತಾಂತರ ಕುರಿತು ವಿಚಾರಗೋಷ್ಠಿ

(2ನೇ ಪುಟದಿಂದ)

ಯದೃಷ್ಟಿಯಿಂದಲೇ ನೋಡುತ್ತಿದ್ದಾರೆ. ಜಗಜೀವನ್‌ರಾಂರು ಮತಾಂತರ ಹೊಂದಿರುವ ವದಂತಿ ಹಬ್ಬಿಸಲಾಯಿತು. ದೇವರು, ಧರ್ಮಗಳ ಹೆಸರಿನಲ್ಲಿ ಸದಾ ಶೋಷಿಸುತ್ತಲೇ ಬರಲಾಗಿದೆ. ಜೊತೆಯಲ್ಲೇ ದಲಿತರನ್ನು ಜನಜೀವನದಿಂದ ದೂರವಿಡಲಾಯಿತು. ಪುರಾಣಗಳಲ್ಲಿ ದಲಿತರನ್ನು ಅಮಾನುಷವಾಗಿ ಚಿತ್ರಿಸಲಾಯಿತು. ಇದನ್ನು ಉಪಯೋಗಿಸಿ ಅನ್ಯಧರ್ಮೀಯರು ಆಶೆ-ಆಮಿಷ ತೋರಿಸಿ ಮತಾಂತರಕ್ಕೆ ಪ್ರಯತ್ನಿಸಲಾಯಿತು.

ದಲಿತರಿಗೆ ಶೇಕಡ 18 ಮೀಸಲಾತಿ ಇನ್ನೂ ಸಿಕ್ಕಿಲ್ಲ. ದಲಿತರು ಎಲ್ಲ ಜಾತಿಗಳ ಕಟ್ಟುಕಟ್ಟಲೆಗಳನ್ನು ಕಿತ್ತೊಗೆದು ಹೊಸ ಸಮಾಜ ನಿರ್ಮಾಣಕ್ಕೆ ಅಣಿಯಾಗಬೇಕಾಗಿದೆ" ಎಂದರು.

ಈ ವಿಚಾರಗೋಷ್ಠಿಯು ದ.ಸಂ.ಸ. ಕಾರ್ಯಕ್ರಮಕ್ಕೆ ಹೊಸ ಆಯಾಮ ತಂದುಕೊಟ್ಟಿತು. ಆರಂಭದಲ್ಲಿ ಜಿ. ಎಸ್. ಶೇಖರ್ ಸ್ವಾಗತಿಸಿದರು; ಕೊನೆಯಲ್ಲಿ ದೇವದಾಸ್ ವಂದಿಸಿದರು.

○

ಸಂಪಾದಕೀಯ

(1ನೇ ಪುಟದಿಂದ)

ಪಾರ್ಲಿಮೆಂಟಿನಲ್ಲಿ ಬಹುಮತವಿದ್ದರೂ, ಒಟ್ಟು ಜನತೆಯ ಬಹುಮತ ಬೆಂಬಲವಿಲ್ಲದ ಇಂದಿರಾ ಸರಕಾರದ ಸರ್ವಾಧಿಕಾರ ಕ್ರಮ ಮತ್ತು ಭ್ರಷ್ಟಾಚಾರಗಳ ವಿರುದ್ಧ ಜನತೆಯು ಒಂದಾಗಿ ಆಂದೋಲನ ನಡೆಸುವಾಗ ಇಂದಿರಾ ಅವರು ಅದೆಂತು ನೀಣುಚಿಕೊಳ್ಳುವರು? ಜನತೆಯ ಗಮನವನ್ನು ಬೇರೆಡೆಗೊಯ್ಯಲು ಕಾಂಗ್ರೈ ಮುಖಂಡರುಗಳು ಸಿ.ಪಿ.ಐ.(ಎಂ) ನೇತೃತ್ವದ ಸರಕಾರಗಳ ಮೇಲೆ ಹಿಂಸಾಚಾರದ ಆರೋಪ ಹೊರಿಸುವುದು, ಕಾಂಗ್ರೈಯೇತರ ಸರಕಾರಗಳನ್ನು ಉರುಳಿಸಲು ಪ್ರಯತ್ನಿಸುವುದು, ಮಾರ್ಕ್ಸಿಸ್ಟರ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪಗಳನ್ನು ಹೊರಿಸುವುದು-ಇವನ್ನೆಲ್ಲಾ ನಡೆಸುವುದಕ್ಕೆ ಜನತೆಯೇ ಮತ್ತೆ ತೀರ್ಪುಕೊಡುವುದೂ ಖಂಡಿತ.

ವಿಶ್ವಶಾಂತಿಯ ಕನಸು ನನಸಾದರೆ....

ಜಾಗತಿಕ ಮಿಲಿಟರಿ ವೆಚ್ಚ ದಿನದಿಂದ ದಿನಕ್ಕೆ ಬೃಹತ್ ಪ್ರಮಾಣದಲ್ಲಿ ಏರುತ್ತಿದೆ. ಜಗತ್ತಿನ ವಾರ್ಷಿಕ ಮಿಲಿಟರಿ ವೆಚ್ಚ ಪ್ರಮಾಣದಿಂದ ಅನೇಕ ಬಡರಾಷ್ಟ್ರಗಳ ಜನತೆಯನ್ನು ಸುಖ, ಸಮೃದ್ಧಿಗಳಿಂದ ರಕ್ಷಿಸಲು ಸಾಧ್ಯ.

ನಮ್ಮ ದೇಶದ ರಕ್ಷಣಾ ಬಜೆಟ್ 4200 ಕೋಟಿ ರೂ.ಗಳು ಈ ಹಣದಿಂದ :

* ಒಂದು ರೂಂನ ಒಂದು ಒಳ್ಳೆಯ ಮನೆಯನ್ನು ದೇಶದ ಜನಸಂಖ್ಯೆಯ 1/5ರಷ್ಟು ಅಂದರೆ 16 ಕೋಟಿ ಜನತೆಗೆ ಗೃಹ ಸೌಲಭ್ಯ ಒದಗಿಸಲು ಸಾಧ್ಯ.
* ಒಂದು ಜಾಗರ್ ವಿಮಾನದ ಬೆಲೆ 8 ಕೋಟಿ ರೂ. ಈ ಹಣದಿಂದ 5 ಕೋಟಿ ಶಾಲಾಬಾಲಕರಿಗೆ ಒಂದು ಜೊತೆ ನೋಟ್‌ಬುಕ್‌ಗಳನ್ನು ಒದಗಿಸಲು ಸಾಧ್ಯ.
* ಒಂದು ಸಬ್‌ಮರೀನದ ಬೆಲೆ 108 ಕೋಟಿ ರೂ. ಈ ಹಣದಿಂದ 2 ಲಕ್ಷ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸಾಧ್ಯ.
* 5 ಟ್ಯಾಂಕ್ (Tanks)ಗಳ ಬೆಲೆ 25 ಕೋಟಿ ರೂ. ಈ ಹಣದಿಂದ 12500 ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ಸಾಧ್ಯ.
* 800 ಯುದ್ಧ ವಿಮಾನಗಳ ರಿಪೇರಿಗಾಗಿ 200 ಕೋಟಿ ರೂ. ಈ ಹಣದಿಂದ 10 ಲಕ್ಷ ಟನ್ ಗೋದಿಯನ್ನು ಖರೀದಿಮಾಡಿ ಸುಲಭದರದಲ್ಲಿ ಹಂಚಬಹುದು.
* ರಕ್ಷಣಾದಳದವರಿಂದ ಉಪಯೋಗಿಸಲಾಗುತ್ತಿರುವ 1000 ಜೀಪು, ಟ್ರಕ್ ಮುಂತಾದವುಗಳ ಬೆಲೆ 100 ಕೋಟಿ ರೂ. ಈ ಹಣದಿಂದ 10,000 ಬಸ್‌ಗಳನ್ನು ಕೊಂಡು ಸಾರಿಗೆ ವ್ಯವಸ್ಥೆ ಇಲ್ಲದೇ ನರಳುತ್ತಿರುವ ಜನತೆಯ ಬವಣೆಯನ್ನು ಸಲ್ಪ ಕಡಿಮೆಮಾಡಬಹುದು.
* ರಕ್ಷಣಾ ಇಲಾಖೆ ಸಂಶೋಧನೆ (!)ಗಾಗಿ ಮಾಡುವ ವೆಚ್ಚ 100 ಕೋಟಿ ರೂ. ಈ ಹಣದಿಂದ ತಲಾ 500 ಹಾಸಿಗೆಗಳುಳ್ಳ 20 ಆಸ್ಪತ್ರೆಗಳನ್ನು ಕಟ್ಟಬಹುದು.

ವಿಶ್ವಶಾಂತಿಯ ಕನಸು ನನಸಾಗುವುದು ಸಮತಾವಾದಿ ಸಮಾಜ ಬಂದಾಗ ಮಾತ್ರ. ಆಗ ದೇಶದೇಶದ ನಡುವೆ ಪೈಪೋಟಿ ಇರುವುದಿಲ್ಲ, ದ್ವೇಷವಿರುವುದಿಲ್ಲ, ಈ ತರದ ಅನವಶ್ಯಕ ವೆಚ್ಚಗಳಿರುವುದಿಲ್ಲ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT